# ಯೇಸು ಕ್ರಿಸ್ತನು ಯಾರು?

## (WHO IS JESUS CHRIST ?)

228074
313390
9844316546



ಭಾ. ಚಂದುದಾಸ್

ದಿ ಕ್ರಿಸ್ಟಡೆಲ್ಫಿಯನ್ ಪ್ರೀಚಿಂಗ್ ಕಮಿಟಿ–ಇಂಡಿಯ
ಅಂಚೆ ಪೆಟ್ಟಿಗೆ 4237, ಬೆಂಗಳೂರು–560 042, ಕರ್ನಾಟಕ

# ಯೇಸುಕ್ರಿಸ್ತನು ಯಾರು?

ಹೊಸ ಒಡಂಬಡಿಕೆಯು ಯೇಸುಕ್ರಿಸ್ತನನ್ನು ಒಬ್ಬ ಪ್ರಮುಖ ವ್ಯಕ್ತಿಯಾಗಿ ಪರಿಚಯಿಸುತ್ತದೆ. ಆತನು ಮಾಡಿದ ಅದ್ಭುತ ಕಾರ್ಯಗಳಲ್ಲಿ ಅಸಾಧಾರಣ ಶಕ್ತಿಯ ಗಮನಾರ್ಹ ಸಾಕ್ಷ್ಯವನ್ನು ಆತನು ಮಾನವ ಜೀವಿತದ ಹಾಗೂ ನಂಬಿಕೆಯು ಮತ್ತು ದೇವರ ನಿಜ ಆರಾಧನೆಯ ಬಗ್ಗೆ ಬಹು ಮರ್ಮಭೇದಕ ಅವಲೋಕನವನ್ನು ಮಾಡಿಸುತ್ತಾನೆ. ಮುಂದೆ ಇಟ್ಟಿರುವ ನಿತ್ಯ ಜೀವದ ಮೂಲ ತಾನೇ ಆಗಿರುವುದಾಗಿ ಹೇಳಿರುವಂತಾದ್ದು ಮತ್ಯಾರೂ ಸಹ ಹಾಗೆ ಹೇಳುವ ಧೈರ್ಯವಿರುವುದಿಲ್ಲ. ಆತನ ಅಪೋಸ್ತಲರು ಆತನ ಆರೋಹಣದ ನಂತರ, ಆತನನ್ನು ಎಲ್ಲಾ ಬಲ ಹಾಗೂ ಅಧಿಕಾರಕ್ಕೆ ಏರಿಸಲ್ಪಟ್ಟು ದೇವರ ಬಲಪಾರ್ಶ್ವದಲ್ಲಿ ಆಸೀನನಾಗಿರುತ್ತಾನೆಂದು ಹೇಳಿದ್ದಾರೆ. ತನ್ನ ಮಹತ್ವದ ವ್ಯಕ್ತಿತ್ವದ ಸೂಚನಾರ್ಥವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಿದ್ದಾನೆ :

> "ಒಬ್ಬನೇ ಸತ್ಯ ದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ
> ಯೇಸುಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು". (ಯೋಹಾನ 17:3).

ಮುಂದಿನ ಜೀವಿತದ ಬಗ್ಗೆ ಏನಾದರೂ ನಿರೀಕ್ಷೆ ಇಟ್ಟುಕೊಂಡಿದ್ದಲ್ಲಿ, ಯೇಸುಕ್ರಿಸ್ತನ ವ್ಯಕ್ತಿತ್ವದ ಮತ್ತು ಮಹತ್ವದ ಬಗ್ಗೆ ಸತ್ಯಾಂಶವನ್ನು ನಾವು ಸ್ಪಷ್ಟವಾಗಿ ತಿಳಿದಿರಲೇ ಬೇಕು.

**ಸಾಂಕೇತಿಕ ನಿರೂಪಣೆ :**

ಯೇಸುಕ್ರಿಸ್ತನ ಬಗ್ಗೆ ಸಾಮಾನ್ಯಾಭಿಪ್ರಾಯವನ್ನು ಗಮನಿಸಿದಲ್ಲಿ, ಅನೇಕರು ಆತನ ಬಗ್ಗೆ ತಪ್ಪು ಅಭಿಪ್ರಾಯವನ್ನು ಹೊಂದಿದ್ದು ಅಂತಹ ಅಭಿಪ್ರಾಯವು ಸತ್ಯವೇದದ ನಿರೂಪಣೆಗೆ ತದ್ವಿರುದ್ಧವಾಗಿರುತ್ತದೆ. ಇಂತಹ ತಪ್ಪು ಅಭಿಪ್ರಾಯವು ಸತ್ಯವೇದದ ಉಲ್ಲೇಖಗಳನ್ನು ಮಾರ್ಪಡಿಸಿ, ಅನ್ಯಜನರ ನಂಬಿಕೆಗಳೊಂದಿಗೆ ಹೊಂದಾಣಿಕೆ ಮಾಡುವುದರಿಂದ ಉದ್ಭವಿಸಿರುತ್ತದೆ. ತತ್ಪರಿಣಾಮವಾಗಿ ಯೇಸುಕ್ರಿಸ್ತನಿಗೂ ಆತನ ತಂದೆಯಾದ ದೇವರಿಗೂ ಇರುವ ಅಂತಸ್ತು, ಗೌರವ, ಅಧಿಕಾರ ಇತ್ಯಾದಿಗಳನ್ನು ಏಕರೂಪಕ್ಕೆ ತಂದು, ಸೃಷ್ಟಿಕರ್ತನಾದ ಒಬ್ಬನೇ ಸತ್ಯ ದೇವರಿಗೆ ಅಪಮಾನವನ್ನುಂಟು ಮಾಡುವವರಾಗಿದ್ದಾರೆ.

ಸತ್ಯವೇದದ ಅನೇಕ ವಚನಗಳು ಯೇಸುಕ್ರಿಸ್ತನ ಬಗ್ಗೆ ಸಾಂಕೇತಿಕ ನಿರೂಪಣೆ ಮಾಡುವಂಥವುಗಳಾಗಿವೆ. ಈ ಕೆಳಗಿನ ವಚನಗಳನ್ನು ಗಮನಿಸಿ :

"ನನ್ನ ಚಿತ್ತದಂತೆ ನಡೆಯುವುದಕ್ಕಾಗಿ ನಾನು ಬಂದಿಲ್ಲ ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವುದಕ್ಕೆ **ಪರಲೋಕದಿಂದ** ಬಂದೆನು".

(ಯೋಹಾನ 6:38).

ಆದರೆ ನಾವು ಕೂಡಲೇ ನಿರ್ಣಯಕ್ಕೆ ಬರಬಾರದು. ಈ ವಿಷಯವು ತೋರುವಷ್ಟು ಸರಳವಾಗಿಲ್ಲ. ಎರಡು ಭಿನ್ನ ರೀತಿಯ ಭಾಷಾ ಶೈಲಿಯನ್ನು ಉಪಯೋಗಿಸಿರುವುದರಿಂದ, ಒಂದು ತೊಂದರೆ ಉದ್ಭವಿಸುತ್ತದೆ. ಅಂದರೆ ವಾಚ್ಯಾರ್ಥ (ಶಬ್ದಾರ್ಥ) ಮತ್ತು ಸಾಂಕೇತಿಕ. ಯೇಸುವು ಎರಡು ರೀತಿಯ ನಿರೂಪಣೆಯನ್ನೂ ತನ್ನ ಮಾತುಗಳಲ್ಲಿ ಉಪಯೋಗಿಸಿದ್ದಾನೆ. ಉದಾಹರಣೆಗೆ ವಚನ 64ರಲ್ಲಿ "ಆದರೆ ನಿಮ್ಮಲ್ಲಿ ಕೆಲವರು ನಂಬದವರಾಗಿದ್ದಾರೆ" ಎಂದು ಹೇಳಿದನು. ಇದನ್ನು ಶಬ್ದಾರ್ಥವಾಗಿಯೇ ಅರ್ಥಮಾಡಿಕೊಳ್ಳಬೇಕೆಂದು ಒಬ್ಬ ಬಾಲಕನೂ ಸಹ ಹೇಳಬಲ್ಲನು. ಆದರೆ ಕೆಲವು ವಚನಗಳು ಆ ರೀತಿಯಿಲ್ಲ. ಉದಾಹರಣೆಗೆ, 53 ಮತ್ತು 54ನೇ ವಚನಗಳನ್ನು ನೋಡಿ.

"ನಿಮಗೆ ನಿಜ ನಿಜವಾಗಿ ಹೇಳುತ್ತೇನೆ ನೀವು ಮನುಷ್ಯ ಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯ ಜೀವವನ್ನು ಹೊಂದಿದ್ದಾನೆ".

ಇದು ಸಾಂಕೇತಿಕ ನಿರೂಪಣೆಯ ಭಾಷೆಯಾಗಿದೆ. ಈ ವಚನವು ಅದು ಹೇಳುವಂತೆ ಅದರ ಅರ್ಥ ಇರುವುದಿಲ್ಲ. ಅದು ಇನ್ನೂ ಆಳವಾದ ಅರ್ಥವನ್ನು ಹೊಂದಿರುತ್ತದೆ. ಅದರ ನಿಜಾರ್ಥವನ್ನು ಕಂಡುಹಿಡಿಯಬೇಕಿದ್ದಲ್ಲಿ ನೀವು ಜಾಗರೂಕತೆಯಿಂದ ಆಲೋಚಿಸಬೇಕು. ನಾವು ಜಾಗರೂಕರಾಗದಿದ್ದಲ್ಲಿ, ಅದನ್ನು ಸುಲಭವಾಗಿ ತಪ್ಪಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ವಾಸ್ತವವಾಗಿ ನಂಬದೇ ಇದ್ದ ಯೆಹೂದ್ಯರು ಇದನ್ನು ಹಾಗೂ ಇದೇ ತರಹದ ಯೇಸುವಿನ ಮಾತುಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು. "ಇವನು ತನ್ನ ಮಾಂಸವನ್ನು ನಮಗೆ ಹೇಗೆ ತಿನ್ನುವುದಕ್ಕೆ ಕೊಟ್ಟಾನು" ಎಂದು ಅವರು ಹೇಳಿದರು. ಬಹುಶಃ ಯೇಸು ನರಭಕ್ಷತೆಯನ್ನು ಬೋಧಿಸುತ್ತಿರುವುದಾಗಿ ಅವರು ಯೋಚಿಸಿರಬಹುದು. ಅವರು ಏನಾದರೂ ಆಲೋಚಿಸಿರಲಿ, ಅವರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು.

ಒಳ್ಳೇದು, ಈ ವಚನದ ಬಗ್ಗೆ ಏನು ಹೇಳುವಿರಿ ?

"ನಾನು ಪರಲೋಕದಿಂದ ಇಳಿದುಬಂದಿದ್ದೇನೆ" ಇದು ಶಬ್ದಾರ್ಥವೋ ಸಾಂಕೇತಿಕವೋ ? ಇದು ಸಾಂಕೇತಿಕವೆಂದು ಪರಿಗಣಿಸಲು ಒಳ್ಳೆಯ ಕಾರಣವಿದೆ. ಅದೇ ಅಧ್ಯಾಯದ (6ನೇ) 31ನೇ ವಚನದಲ್ಲಿ ಹಳೇ ಒಡಂಬಡಿಕೆಯ "ಮನ್ನಾ" ಎಂಬುದರ ಬಗ್ಗೆ ಉಲ್ಲೇಖಿಸಿದೆ. ಈ "ಮನ್ನಾ" ಎಂಬುದು ಅರಣ್ಯದಲ್ಲಿ ದೇವರು ಅದ್ಭುತ ಕಾರ್ಯದಿಂದ ತನ್ನ ಜನರಿಗೆ ತಿನ್ನಲು ಒದಗಿಸಿದ ಒಂದು ತರಹದ ರೊಟ್ಟಿಯಾಗಿತ್ತು. 31ನೇ ವಚನವು ಹೀಗಿದೆ : "ಆತನು (ದೇವರು) **ಪರಲೋಕದಿಂದ** ರೊಟ್ಟಿಯನ್ನು ಅವರಿಗೆ ತಿನ್ನುವುದಕ್ಕೆ ಕೊಟ್ಟನು".

ಇದು ಸಂಪೂರ್ಣವಾಗಿ ಸಾಂಕೇತಿಕ ಭಾಷೆಯಾಗಿದೆ. ಆ ಅದ್ಭುತವಾದ ರೊಟ್ಟಿಯನ್ನು ಪರಲೋಕದಲ್ಲಿ ಬೇಯಿಸಲಿಲ್ಲ ಹಾಗೂ ನಂತರ ಭೂಲೋಕಕ್ಕೆ ರವಾನಿಸಲಿಲ್ಲ. ಅದು ಪರಲೋಕದಿಂದ ಬಂದಿತು ಎಂಬ ವಾಕ್ಯವು ಪರಲೋಕದ ದೇವರು ಅದನ್ನು ಭೂಮಿಯ ಮೇಲೆ ಸೃಷ್ಟಿಸಿದನು ಎಂಬ ಅರ್ಥವನ್ನು ನಮಗೆ ಕೊಡುತ್ತದೆ.

ಬೆಳೆ ಕೊಯ್ಯುವ (ಕೊಯಿಲು) ಕಾಲದಲ್ಲಿ ಅನೇಕರು ಒಂದು ಸ್ತೋತ್ರ ಗೀತವನ್ನು ಹಾಡುತ್ತಾರೆ. ಅದರಲ್ಲಿ "ಎಲ್ಲಾ ಒಳ್ಳೇ ದಾನಗಳು ಮೇಲಣ ಪರಲೋಕದಿಂದ ಕೊಡಲ್ಪಟ್ಟಿವೆ" ಎಂದು ಹಾಡುತ್ತಾರೆ. ಇದರಲ್ಲಿನ ಪದಗಳನ್ನು ಯಾಕೋಬನ ಪತ್ರಿಕೆ 1:17 ರಿಂದ ನೇರವಾಗಿ ತೆಗೆದುಕೊಳ್ಳಲಾಗಿದೆ. "ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲ ವಿಧವಾದ **ಬೆಳಕಿಗೂ** ಮೂಲ ಕಾರಣನಾದವನಿಂದ (ತಂದೆಯಿಂದ) ಇಳಿದುಬರುತ್ತವೆ". ವ್ಯವಸಾಯಗಾರರು ಈ ಹಾಡನ್ನು ಹೇಳುವಾಗ, ಅವರ ಬೆಳೆಗಳು ವಾಸ್ತವಿಕವಾಗಿ ಪರಲೋಕದಿಂದ ಇಳಿದು ಬಂದಿತೆಂದು ಭಾವಿಸುವುದಿಲ್ಲ. ತಮ್ಮ ಬೆಳೆಗಳನ್ನು ದೇವರು ಕೊಡುತ್ತಾನೆಂದು ಅವರು ಭಾವಿಸುತ್ತಾರೆ.

## ಹೆಚ್ಚು ಸೂಚ್ಯಾರ್ಥಕ (ಸಾಂಕೇತಿಕ) ಭಾಷೆ

ಸತ್ಯವೇದವು ಇಂತಹ ಸೂಚ್ಯಾರ್ಥಕ ಭಾಷೆಯನ್ನು ಮನುಷ್ಯರ ಬಗ್ಗೆ ಹಾಗೂ ವಸ್ತುಗಳ ಬಗ್ಗೆ ಉಪಯೋಗಿಸುತ್ತದೆ. "**ದೇವರು ಕಳುಹಿಸಿದ** ಒಬ್ಬ ಮನುಷ್ಯನು ಬಂದನು ; ಅವನ ಹೆಸರು ಯೋಹಾನನು" (ಯೋಹಾನ 1:6), ಆದರೂ ಯೋಹಾನನು ಎಂದಿಗೂ ಪರಲೋಕದಲ್ಲಿರಲಿಲ್ಲ. "ದೇವರು ಕಳುಹಿಸಿದನು"

ಎಂದರೆ ದೇವರು ಅವನಿಗೆ ಒಂದು ವಿಶೇಷ ಕಾರ್ಯವನ್ನು ಮಾಡಲು ಕೊಟ್ಟನು ಎಂದರ್ಥ.

ಆದರೆ ಈ ವಿವರಣೆಯು ಯೇಸುವು ಪರಲೋಕದಿಂದ "ಇಳಿದು ಬಂದನು" ಎಂದು ತಿಳಿಸುವ ವಚನಗಳಿಗೆ ಮಾತ್ರ ಅನ್ವಯಿಸುವಂತದ್ದಾಗಿದೆ. ಆದರೆ ಯೇಸುವು ಭೂಲೋಕದ ಮೇಲೆ ಕಾಣಿಸಿಕೊಳ್ಳುವ ಬಹಳ ಹಿಂದೆಯೇ ಆತನು ಪರಲೋಕದಲ್ಲಿ ಒಮ್ಮೆ ಜೀವಿಸಿದ್ದನು ಎಂದರ್ಥ ಕೊಡುವ ಅನೇಕ ವಚನಗಳು ಸತ್ಯವೇದದಲ್ಲಿವೆ. ಅವುಗಳಲ್ಲಿ ಇದೊಂದಾಗಿದೆ :–

"ಈಗ ತಂದೆಯೇ (ಯೇಸು ಹೇಳಿದ್ದು), ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆ ಪಡಿಸು ; ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು". (ಯೋಹಾನ 17:5).

ಇಂತಹ ವಚನಗಳ ಬಗ್ಗೆ ಏನು ಹೇಳೋಣ ? ಇವು ಶಬ್ದಾರ್ಥವಾಗಿ ತೆಗೆದು ಕೊಳ್ಳಬಹುದೇ ಇಲ್ಲವೇ ಸೂಚ್ಯಾರ್ಥವಾಗಿ ತೆಗೆದುಕೊಳ್ಳಬಹುದೇ ? ಇಲ್ಲವೇ ಈ ವಚನವು ಇನ್ನೂ ಆಳವಾದ ಅರ್ಥ ಕೊಡುವಂತದೇ ? ಸತ್ಯವೇದವು ತಾನೇ ಮಾತಾಡಿ ಈ ಪ್ರಶ್ನೆಗಳಿಗೆ ಉತ್ತರ ನೀಡಲಿ ಎಂಬುದೇ ಈ ಲೇಖನದ ಉದ್ದೇಶವಾಗಿದೆ.

## ಯೇಸುವಿನ ಬಗ್ಗೆ ಮೂರು ಅಭಿಪ್ರಾಯಗಳು

ಸತ್ಯವೇದವನ್ನು ಯಾರು ನಂಬುವುದಿಲ್ಲವೋ ಅಂತಹ ಜನರು ಯೇಸುವು ಒಬ್ಬ ಸಾಮಾನ್ಯ ಮನುಷ್ಯನಾಗಿದ್ದನು ಎಂದು ಅಭಿಪ್ರಾಯ ಪಡುತ್ತಾರೆ. ಅವರ ಅಭಿಪ್ರಾಯವು ತಪ್ಪಾಗಿರುತ್ತದೆ. ಆತನು ದೇವರ ಮಗನಾಗಿದ್ದನು. ಅವರ ಅಭಿಪ್ರಾಯವನ್ನು ಪರಿಗಣಿಸಲು ನಾವು ಸಮಯವನ್ನು ವ್ಯರ್ಥ ಮಾಡುವ ಅಗತ್ಯವಿಲ್ಲ.

ಆದರೆ ಸತ್ಯವೇದವನ್ನು ನಂಬುವ ಕ್ರೈಸ್ತರ ಮೂರು ಭಿನ್ನ ರೀತಿಯ ಅಭಿಪ್ರಾಯಗಳನ್ನು ಪರಿಗಣಿಸೋಣ.

ಮೊದಲನೆಯದು, ಬಹಳ ಸಾಮಾನ್ಯವಾಗಿ ಹೊಂದಿರುವ ಅಭಿಪ್ರಾಯ ವಾಗಿದೆ. ಇದು, ಯೇಸುವು ಸರ್ವಶಕ್ತನಾದ ದೇವರ ಮಾನವ ರೂಪಿಯಾಗಿ ದ್ದಾನೆ ಎಂಬುದಾಗಿದೆ. ಇದನ್ನು ನಂಬುವ ಜನರು, ಅನೇಕ ವೇಳೆ ಯೇಸುವನ್ನು

ತ್ರಯೈಕತ್ವದಲ್ಲಿನ, "ಎರಡನೇ ವ್ಯಕ್ತಿ"ಯಾಗಿದ್ದಾನೆಂದು ಹೇಳುತ್ತಾರೆ. ಆದರೂ ಅವರು ಏನೆಂದು ಅರ್ಥ ಮಾಡಿಕೊಂಡಿದ್ದಾರೆಂದು ಕಂಡುಹಿಡಿಯಲು ಸುಲಭ ಸಾಧ್ಯವಿಲ್ಲ, ಈ ಅಭಿಪ್ರಾಯದ ರೀತ್ಯಾ, ಯೇಸುವು ಭೂಲೋಕದ ಮೇಲೆ ಜೀವಿಸುವ ಮುನ್ನ ಆತನು ಎಂದೆಂದಿಗೂ ಪರಲೋಕದಲ್ಲಿ ಜೀವಿಸಿದ್ದನು ಎಂದಾಗುತ್ತದೆ.

ಎರಡನೇ ಅಭಿಪ್ರಾಯವು "ಯೆಹೋವನ ಸಾಕ್ಷಿಗಳು" ಹಾಗೂ ಇತರ ಕೆಲವು ಚಿಕ್ಕ ಗುಂಪುಗಳು ಬೋಧಿಸುವಂತದ್ದಾಗಿದೆ. ಯೇಸುವು ದೇವರಲ್ಲವೆಂದೂ, ಬಹಳ ಕಾಲದ ಹಿಂದೆಯೇ ದೇವರು ಉಂಟುಮಾಡಿದ ಒಬ್ಬ ಪ್ರಧಾನ ದೂತನೆಂದು ಅವರು ಹೇಳುತ್ತಾರೆ. ಅವರೂ ಸಹ ಯೇಸುವು ಈ ಲೋಕದ ಮೇಲೆ ಜೀವಿಸುವ ಮುನ್ನ ಬಹಳ ಹಿಂದೆಯೇ ಪರಲೋಕದಲ್ಲಿ ವಾಸವಾಗಿದ್ದನೆಂದು ನಂಬುತ್ತಾರೆ.

ಮೇಲ್ಕಂಡ ಎರಡು ಅಭಿಪ್ರಾಯಗಳಲ್ಲೊಂದನ್ನು ಹಿಡಿದಿರುವವರು, ಯೇಸುವು ಪರಲೋಕದಿಂದ ಬಂದನು ಎಂದು ಹೇಳುವ ವಚನಗಳನ್ನು ಅಕ್ಷರಶಃ ಅರ್ಥಮಾಡಿಕೊಳ್ಳುವವರಾಗಿದ್ದಾರೆ.

ಮೂರನೇ ಅಭಿಪ್ರಾಯವನ್ನು ಕ್ರಿಸ್ಟಡೆಲ್ಫಿಯನ್ನರು ಮತ್ತು ಕೆಲವರು ಹೊಂದಿದ್ದಾರೆ. ಯೇಸುವು ಈ ಲೋಕದಲ್ಲಿ ಹುಟ್ಟುವ ಮುನ್ನ ಪರಲೋಕದಲ್ಲಿ ವೈಯಕ್ತಿಕವಾಗಿ ಜೀವಿಸಿರಲಿಲ್ಲವೆಂದೂ, ಆತನ ಪರಲೋಕ ಮೂಲದ ವಚನಗಳನ್ನು ಸೂಚನಾರ್ಥವಾಗಿ ಗ್ರಹಿಸಬೇಕೆಂದೂ ಕ್ರಿಸ್ಟಡೆಲ್ಫಿಯನ್ನರ ಅಭಿಪ್ರಾಯವಾಗಿದೆ.

ಈ ಅಭಿಪ್ರಾಯವನ್ನೇ ಈ ಲೇಖನದಲ್ಲಿ ವಿವರಿಸುತ್ತೇನೆ. ಇದು ನಿಮಗೆ ಆಶ್ಚರ್ಯವನ್ನುಂಟುಮಾಡುವುದಾದಲ್ಲಿ, ದಯೆಯಿಟ್ಟು ತಾಳ್ಮೆಯಿಂದಿದ್ದು ಮುಂದಕ್ಕೆ ಓದಿ. ಈ ಅಭಿಪ್ರಾಯವನ್ನು ಪುಷ್ಟೀಕರಿಸಲು ಸತ್ಯವೇದದಲ್ಲಿ ಒಂದು ಹೊರೆಯಷ್ಟು ಸಾಕ್ಷ್ಯಾಧಾರಗಳಿವೆ.

## ಯೇಸುವು ನಿಜವಾಗಿಯೂ ಒಬ್ಬ ಮಾನವನಾಗಿದ್ದನು

ಯೇಸುವು ಒಬ್ಬ ಸಾಧಾರಣ ಹಾಗೂ ಪಾಪಿಯಾದ ಮಾನವನಾಗಿರಲಿಲ್ಲ. ಈ ಬಗ್ಗೆ ನಾವು ಯಾವುದೇ ತಪ್ಪು ಮಾಡದೇ ಇರೋಣ. ಆದರೂ ಸಹ, ನಿಜವಾದ ಅರ್ಥದಲ್ಲಿ ಆತನು ಒಬ್ಬ ಮಾನವನಾಗಿದ್ದನೇ ಹೊರತು ಸರ್ವಶಕ್ತನಾದ ದೇವರಾಗಿರಲಿಲ್ಲ.

ಆತನು ಶಾರೀರಕವಾಗಿ ಪರಲೋಕಕ್ಕೆ ಹೋದ ಕೂಡಲೇ ಆತನು ಮಾನವನಾಗಿರುವುದು ಕೊನೆಯಾಯಿತು ಎಂದರ್ಥವಲ್ಲ, ಈಗಲೂ ಸಹ ಆತನು ಮಾನವನಾಗಿಯೇ ಇದ್ದಾನೆಂದು ತಿಳಿಯಬೇಕೆಂದು ಸತ್ಯವೇದವು ಬೋಧಿಸುತ್ತದೆ.

**ಯೇಸುವು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋದ ಬಹಳ ಕಾಲದ ನಂತರವೂ ಹೊಸ ಒಡಂಬಡಿಕೆಯು ಇಂತಹ ಸಾಕ್ಷ್ಯವನ್ನು ಕೊಡುತ್ತದೆ.**

"ಆದರೆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ **ಬಹಳ** ಹೆಚ್ಚು ಕಡಿಮೆ ಉಂಟು. ಹೇಗೆಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ **ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ** ಕೃಪೆಯಿಂದ ಸಿಕ್ಕುವ ವರವೂ....ಮತ್ತೂ ನಿಶ್ಚಯವಲ್ಲವೇ ? ....**ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ** ಜೀವ ಭರಿತರಾಗಿ ಆಳುವುದು ಮತ್ತೂ ನಿಶ್ಚಯವಲ್ಲವೇ ?" (ರೋಮಾಪುರ 5:15-19).

"ದೇವರು ಒಬ್ಬನೇ ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ; ಆತನು **ಮನುಷ್ಯನಾಗಿರುವ ಕ್ರಿಸ್ತ ಯೇಸುವೇ**". (1 ತಿಮೋಥೆ 2:5)

ಹಾಗಾದರೆ ಯೇಸುವು ನಿಜವಾಗಿಯೂ ಒಬ್ಬ ಮನುಷ್ಯನಾಗಿದ್ದಾನೆ. ಹೊಸ ಒಡಂಬಡಿಕೆಯ ನಿಸ್ಸಂದೇಹವಾದ ಬೋಧನೆಯು ಇದೇ ಆಗಿದೆ.

ಆದರೆ ಕೆಲವು ವೇದಾಂತಿಗರು ಹಾಗೂ ಕ್ರೈಸ್ತ ಮತಾಧಿಕಾರಿಗಳು ಹೀಗೆ ಅಭಿಪ್ರಾಯಪಡುತ್ತಾರೆ: "ಯೇಸುವು ಹುಟ್ಟಿ, ಬೆಳೆದ ಒಬ್ಬ ಮಾನವನಾಗಿರಲಿಲ್ಲ ; ಒಂದು ಒಗಟಿನಲ್ಲಿ ಪಾಲ್ಗೊಂಡವನಾಗಿ, ಅವನು ಒಂದು ಸೀಮಿತ ಅವಧಿಗೆ ಮಾತ್ರ ದೇವರಾಗಿದ್ದನು. ಅವನು ಮಾನವನಂತೆ ಕಾಣುತ್ತಿದ್ದನು, ಆದರೆ ಒಳಗೆ ದೇವರಾಗಿದ್ದು ಕ್ರಿಸ್‌ಮಸ್ ಫಾದರ್‌ನಂತೆ ಮೇಲೆ ಧರಿಸಿದವನಾಗಿದ್ದನು". (ಡಾ॥ ರಾಬಿನ್‌ಸನ್, ವೂಲ್‌ವಿಚನ್‌ನ ಬಿಷಪ್, ತಮ್ಮ "ಹಾನೆಸ್ಟ್ ಟು ಗಾಡ್" ಎಂಬ ಪುಸ್ತಕದಲ್ಲಿ).

ಯೇಸುವನ್ನು ಕ್ರಿಸ್‌ಮಸ್ ಫಾದರ್‌ಗೆ ಹೋಲಿಸಿರುವುದನ್ನು ಅನೇಕ ಕ್ರೈಸ್ತರು ಖಂಡಿಸಿದರೂ, ಈ ಒಂದು ಅಭಿಪ್ರಾಯವನ್ನು ಒಪ್ಪುವವರಾಗಿದ್ದಾರೆ. ಯೇಸುವು ನಿಜವಾಗಿಯೂ ದೇವರಾಗಿದ್ದಿದ್ದಲ್ಲಿ, ಇಲ್ಲವೇ ಪರಲೋಕದಲ್ಲಿ ಒಂದಾನೊಂದು ಕಾಲದಲ್ಲಿ ವಾಸಿಸುತ್ತಿದ್ದ ದೇವದೂತನಾಗಿದ್ದಲ್ಲಿ, ಅವನು ಎಂದಿಗೂ ಒಬ್ಬ ನಿಜವಾದ ಮನುಷ್ಯನಾಗಿರಲಿಲ್ಲ, ಆದರೆ ಮಾನವ ಶರೀರವನ್ನು ಹೊದ್ದುಕೊಂಡ ಒಬ್ಬ ದೈವೀಕ ವ್ಯಕ್ತಿಯಾಗುತ್ತಾನೆ.

ಆದರೆ ಹೊಸ ಒಡಂಬಡಿಕೆಯು ಒಪ್ಪುವುದಿಲ್ಲ. ಯೇಸುವು ಒಬ್ಬ ಮನುಷ್ಯನೆಂದು ಅದು ಬೋಧಿಸುತ್ತದೆ.

ಯೇಸುವಿನ ಬಗ್ಗೆ ಸಾಮಾನ್ಯಾಭಿಪ್ರಾಯವು ತಪ್ಪಾಗಿದೆ ಎಂದು ನಾವು ಭಾವಿಸುವುದಕ್ಕೆ ಇದು ಮೊದಲನೆಯ ಕಾರಣವಾಗಿರುತ್ತದೆ.

**ಯೇಸುವಿನ ಜನನ :**

ಕರ್ತನಾದ ಯೇಸುಕ್ರಿಸ್ತನ ಜನನವು ಒಂದು ಮಹಾ ಅದ್ಭುತದ ಫಲವಾಗಿದೆ. ಆತನ ತಾಯಿಯು ಸದ್ಗುಣಳಾದ ಒಬ್ಬ ಯೌವನಸ್ಥ ಅವಿವಾಹಿತ ಸ್ತ್ರೀಯಾಗಿದ್ದಳು. ಅವಳು ಒಬ್ಬ ಕನ್ನಿಕೆಯಾಗಿದ್ದಳು. ಇದು ಹೀಗೆ ಸಂಭವಿಸಿತು :

"ಆ ದೂತನು ಆಕೆಗೆ—ಮರಿಯಳೇ ಹೆದರಬೇಡ; ನಿನಗೆ ದೇವರ ದಯೆ ದೊರಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು....ಮರಿಯಳು ಆ ದೂತನನ್ನು – ಇದು ಹೇಗಾದೀತು ? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು—ನಿನ್ನ ಮೇಲೆ ಪವಿತ್ರಾತ್ಮ ಬರುವದು ; **ಪರಾತ್ಪರನ ಶಕ್ತಿಯು** ನೆರಳು ನಿನ್ನ ಮೇಲೆ ಬೀಳುವದು ; ಆದದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು". (ಲೂಕ 1:30-35).

ಈ ವಾಕ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರಿ. ಅವುಗಳಿಂದ ಬಹಳಷ್ಟು ಕಲಿಯಬಹುದಾಗಿದೆ. ಆ ಮಗು ಮರಿಯಳ ಸ್ವಂತ ಮಗನಾಗ ಬೇಕಿರುತ್ತೆ. ಆ ದೂತನು "ಮರಿಯಳೇ, ಒಬ್ಬ ದೈವೀಕ ಪುರುಷನು ಬಂದು, ನಿನ್ನಲ್ಲಿ ಜೀವಿಸಲು, ಮಾಂಸದ ಒಂದು ಶರೀರವನ್ನು ನೀನು ತಯಾರುಮಾಡುವಿ" ಎಂದು ಹೇಳಲಿಲ್ಲ. ಆತನು ಹೇಳಿದ್ದು, "ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ". ಈ ಪದಗಳು ಸ್ಪಷ್ಟವಾಗಿದ್ದು, ಅಕ್ಷರಶಃ ಅರ್ಥಮಾಡಿಕೊಳ್ಳಬೇಕೆಂದೇ ಉದ್ದೇಶಿತವಾಗಿವೆ. ಅವು ಒಂದು ನೂತನ ಮಾನವ ಜೀವದ ಪ್ರಾರಂಭವನ್ನು ವಿವರಿಸುತ್ತದೆ – ಒಬ್ಬ ದೈವೀಕ ಪುರುಷನು ಭೂಲೋಕಕ್ಕೆ ಬರುವುದನ್ನು ತಿಳಿಸುವುದಿಲ್ಲ.

ಯೇಸುವು ಒಬ್ಬ ದೈವೀಕ ಪುರುಷನಾಗಿದ್ದು, ಮರಿಯಳಿಗಿಂತ ಲಕ್ಷಾಂತರ ವರ್ಷಗಳಷ್ಟು ವಯಸ್ಸಾಗಿದ್ದಲ್ಲಿ, ಯಾವುದೇ ಅರ್ಥದಲ್ಲಿಯಾದರೂ ಆತನು ಆಕೆಯ ಮಗನಾಗಲು ಹೇಗೆ ಸಾಧ್ಯ ? ಆದರೂ ಸಹ ಆತನು ಅವಳ ಮಗನಾಗಿದ್ದನು. ಕೇವಲ ಒಬ್ಬ ಅಸಾಧಾರಣ ಸಾಕುಮಗನಾಗಿರಲಿಲ್ಲ. ಸುವಾರ್ತೆಗಳಲ್ಲೆಲ್ಲಾ ಆಕೆಯನ್ನು ಆತನ ತಾಯಿಯೆಂದು ಕರೆದಿದೆಯೇ ಹೊರತು, ಎಂದಿಗೂ ಆತನ ಸಾಕು ತಾಯಿಯೆಂದು ಕರೆದಿಲ್ಲ.

ಯೇಸುವಿನ ತಾಯಿಯನ್ನು ನಂತರ ಮದುವೆಯಾದ ಯೋಸೇಫನನ್ನು ಆತನ ತಂದೆಯೆಂದು ಕೆಲವು ವೇಳೆ ಕರೆದಿದ್ದರೂ, ವಾಸ್ತವಿಕ ಸಂಗತಿಗಳ ಬಗ್ಗೆ, ನಮ್ಮನ್ನು ಸಂದೇಹಕ್ಕೀಡುಮಾಡಿಲ್ಲ. ಲೂಕನು, ಯೇಸುವನ್ನು "ಜನರ ಎಣಿಕೆಯಲ್ಲಿ ಯೋಸೇಫನ ಮಗನು" (the Son, was supposed of Joseph) ಎಂದು ಉಲ್ಲೇಖಿಸಿದ್ದಾನೆ. (ಲೂಕ 3:23). ಆದ್ದರಿಂದ ಯೇಸುವು ನಿಜವಾಗಿಯೂ ಮರಿಯಳ ಮಗನಾಗಿದ್ದನು. ಮರಿಯಳ ಮಗನೆಂದು ನಟನೆ ಮಾಡುತ್ತಿದ್ದ ಒಬ್ಬ ದೈವೀಕ ಪುರುಷನಾಗಿರಲಿಲ್ಲ. ಮಕ್ಕಳು ಮಾಡುವ ಹಾಗೆ, ಅನೇಕ ರೀತಿಯಲ್ಲಿ ಆತನು ತನ್ನ ತಾಯಿಯನ್ನು ಹೋಲುತ್ತಿದ್ದನು. ಅದೇ ಆತನನ್ನು ನಿಜವಾಗಿಯೂ ಒಬ್ಬ ಮನುಷ್ಯನನ್ನಾಗಿ ಮಾಡಿತು. ನಿಜವಾದ ಮನುಷ್ಯರು ತಾವು ಹುಟ್ಟುವ ಮುನ್ನ ಪರಲೋಕದಲ್ಲಿ ಜೀವಿಸಿರುವುದಿಲ್ಲ. ಈ ಮನುಷ್ಯನೂ ಸಹ ಹುಟ್ಟುವ ಮುನ್ನ ಪರಲೋಕದಲ್ಲಿ ಜೀವಿಸಿರಲಿಲ್ಲ. ಆತನ ಅದ್ಭುತವಾದ ಗರ್ಭಧಾರಣೆ ಹಾಗೂ ಜನನವೇ ಒಬ್ಬ ವ್ಯಕ್ತಿಯಾಗಿ ಆತನ ಅಸ್ತಿತ್ವದ ಪ್ರಾರಂಭವಾಗಿದೆ.

ಮಾನವ ಪ್ರಕೃತಿಯು ಬಲಹೀನವಾದುದು ಮತ್ತು ಶೋಧನೆಗಳಿಂದ ಕೂಡಿದೆ. ಮುಂದೆ ನಾವು ನೋಡುವಂತೆ, ಯೇಸುವು ಮಾನವ ಸಹಜ ಬಲಹೀನತೆಯನ್ನು ತನ್ನ ತಾಯಿಯಿಂದ ಪಾರಂಪರ್ಯವಾಗಿ ಹೊಂದಿದ್ದನು. ಆದರೆ ಅದು ಅರ್ಧ ಕಥೆ ಮಾತ್ರ ಆಗಿದೆ. ಯೇಸುವು ದೇವರ ಮಗನೂ ಸಹ ಆಗುತ್ತಾನೆಂದು ಆ ದೂತನು ಮರಿಯಳಿಗೆ ಸ್ಪಷ್ಟಪಡಿಸಿದ್ದನು. "ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವದು ; ಆದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವುದು". (ಲೂಕ 1:35).

ಯೇಸುವು ತನ್ನ ತಂದೆಯಿಂದ ಅನೇಕ ವಿಷಯಗಳನ್ನು ಪಾರಂಪರ್ಯವಾಗಿ ಪಡೆದಿದ್ದನು. ದೇವರು ಆತನ ತಂದೆಯಾಗಿದ್ದನು. ಯಾವುದು ಒಳ್ಳೇದೋ ಅದನ್ನು ಯಾವಾಗಲೂ ಮಾಡಬೇಕೆಂಬ ಆಕಾಂಕ್ಷೆಯನ್ನು ಆತನು ದೇವರಿಂದ ಪಡೆದಿದ್ದನು. ತನ್ನ ಮಾನವ ಸಹಜ ಬಲಹೀನತೆಯನ್ನು ಶೋಧನೆಗಳನ್ನು ಎದುರಿಸಿ, ಅದನ್ನು ಜಯಿಸಲು ಇದೇ ಆತನಿಗೆ ಸಹಾಯ ಮಾಡಿದ್ದು.

## ಯೇಸುವಿನ ಬಾಲ್ಯ

ಯೇಸುವಿನ ಬಾಲ್ಯದ ಬಗ್ಗೆ ನಮಗೆ ಹೆಚ್ಚಾಗಿ ತಿಳಿಸಿಲ್ಲ. ನಮಗೆ ತಿಳಿಸಿರುವ ಒಂದು ವಿಷಯ ಮಾತ್ರ ಬಹಳ ಪ್ರಾಮುಖ್ಯವಾದುದು. ಆತನು ಬೆಳೆದ ರೀತಿಯನ್ನು ಲೂಕನು ಹೀಗೆ ವಿವರಿಸುತ್ತಾನೆ :

"ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು". (ಲೂಕ 2:52).

ಯೇಸುವು ವಾಸ್ತವವಾಗಿ ದೇವರಾಗಿದ್ದಾನೆಂದು ನಂಬುವವರಿಗೆ ಈ ವಚನವು ದಿಗ್ಭ್ರಮೆಗೊಳಿಸಬಹುದು. ದೇವರು ಹೇಗೆ ತಾನೇ ಜ್ಞಾನದಲ್ಲಿ ವೃದ್ಧಿಯಾಗಿ, ತನ್ನ ದಯೆಯೇ ತನ್ನ ಮೇಲೆ ಹೇಗೆ ಹೆಚ್ಚಾಗಬಹುದು? ಅಂತಹ ಕಲ್ಪನೆಯೇ ಅಸಂಬದ್ಧವಾದುದು. ಯೇಸುವು ಸ್ವಲ್ಪ ಅವಧಿಗೆ ಒಬ್ಬ ಬಾಲಕನ ಶರೀರದಲ್ಲಿ ವಾಸಿಸುವ ದೇವರೆಂದು, ಲೂಕನು ಎಂದಿಗೂ ನಂಬಿರಲಿಲ್ಲವೆಂಬುದು ಸ್ಪಷ್ಟವಾಗಿದೆ.

ಯೇಸುವಿನ ಬಗ್ಗೆ ಮತ್ತೊಂದು ಕಲ್ಪನೆಯ ವಿಷಯದಲ್ಲಿ ಏನು ಹೇಳುವಿರಿ? ಆತನು ಪರಲೋಕದಲ್ಲಿ ಒಬ್ಬ ಬಲಿಷ್ಠ ದೇವದೂತನಾಗಿದ್ದು, ಬೆಳೆಯುತ್ತಿರುವ ಈ ಬಾಲಕನ ಶರೀರದಲ್ಲಿ ವಾಸಿಸುತ್ತಿದ್ದನೆಂದು ಅನೇಕರ ಕಲ್ಪನೆಯಿದೆ. ಇದು ಅದಕ್ಕಿಂತ ಉತ್ತಮವಾದುದಲ್ಲ. ಭೂಲೋಕಕ್ಕೆ ಬರುವ ಮುನ್ನ ಅಂತಹ ದೂತನೊಬ್ಬನು ನಿಶ್ಚಯವಾಗಿಯೂ ಪರಿಪೂರ್ಣ (Perfect) ನಾಗಿರಬೇಕು. ಒಬ್ಬ ಬಾಲಕನ ಶರೀರದಲ್ಲಿರುವ ಒಬ್ಬ ದೇವದೂತನು "ಜ್ಞಾನದಲ್ಲಿಯೂ.... ವೃದ್ಧಿಯಾಗುತ್ತಾ ಬಂದನು....ದೇವರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು" ಎಂಬುದು ಸಾಧ್ಯವಿಲ್ಲ. ಈ ವಚನವು ಒಬ್ಬ ನಿಜವಾದ ಬಾಲಕನ ಬೆಳವಣಿಗೆಯನ್ನು ವಿವರಿಸುತ್ತದೆ. ಅವನ ಶರೀರವು ಬೆಳೆಯಿತು. ಅವನಲ್ಲಿದ್ದ ಜ್ಞಾನವು ಕ್ರಮೇಣ ವಿಕಾಸಗೊಂಡಿತು. ಅವನ ಗುಣಗಳು ತುಂಬಾ ಚೆನ್ನಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಂತೆಯೇ ಅವನ ತಂದೆಯು ಅವನನ್ನು ಹೆಚ್ಚು ಹೆಚ್ಚಾಗಿ ಪ್ರೀತಿಸುತ್ತಿದ್ದನು.

## ಶೋಧನೆಯ ಮೇಲೆ ಜಯ

ಕರ್ತನಾದ ಯೇಸುವು ಮಾನವ-ಶೋಧನೆಗಳ ವಿರುದ್ಧ ಒಂದು ದೊಡ್ಡ ಹೋರಾಟ ಮಾಡುತ್ತಿದ್ದುದಾಗಿ ಸತ್ಯವೇದವು ವಿವರಿಸುತ್ತದೆ. ಆತನು ಪ್ರತಿ ನಿತ್ಯವೂ ಶೋಧನೆಯೊಂದಿಗೆ ಹೋರಾಟ ಮಾಡಿದನು. ಮತ್ತು ಪ್ರತಿಸಾರಿಯೂ ಜಯ ಹೊಂದಿದನು. ಶೋಧನೆ ಎಂದರೇನು ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಯೇಸುವು ನಿಜವಾಗಿಯೂ ಒಬ್ಬ ಮಾನವನಾಗಿದ್ದಲ್ಲಿ ಅವನು ಎಂತಹ ಹೋರಾಟ ಮಾಡಿದನೆಂದು ನಾವು ತಿಳಿಯಬಹುದಾಗಿದೆ. ಯೇಸುವು ಪರಲೋಕದ ಒಬ್ಬ ವ್ಯಕ್ತಿಯಾಗಿದ್ದು ಮಾನವ ಶರೀರಧಾರಿಯಾಗಿದ್ದಲ್ಲಿ ಅದು ಎಂದಿಗೂ ಹೋರಾಟವೇ

ಅಲ್ಲ—ಕೇವಲ ಒಂದು ನಟನೆ ಆಗುತ್ತಿತ್ತು. ಯಾಕೆಂದರೆ ದೇವರಾಗಲೀ ಇಲ್ಲವೇ ಒಬ್ಬ ದೇವದೂತನಾಗಲೀ ನಮ್ಮ ಹಾಗೆ ಶೋಧಿಸಲ್ಪಡುವ ಸಾಧ್ಯತೆಯೇ ಇಲ್ಲ. ಸತ್ಯವೇದವು "ದೇವರು ಕೆಟ್ಟದ್ದರಿಂದ ಶೋಧಿಸಲ್ಪಡದವನು" ಎಂದು ಹೇಳುತ್ತದೆ. (ಯಾಕೋಬ 1:13 ಹಳೇ ಭಾಷಾಂತರ). ಆದರೂ ಸಹ ಯೇಸುವಿನ ಬಗ್ಗೆ ನಮಗೆ ಹೀಗೆ ತಿಳಿಸಲ್ಪಟ್ಟಿದೆ : "ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆತನು **ಸರ್ವವಿಷಯ ಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು** ಪಾಪ ಮಾತ್ರ ಮಾಡಲಿಲ್ಲ". (ಇಬ್ರಿಯ 4:15).

ಒಮ್ಮೆ ಯೇಸು ಶೋಧನೆಯ ವಿರುದ್ಧ ಹೋರಾಡುತ್ತಿದ್ದಾಗ "ಹೇಗೂ ನನ್ನ ಚಿತ್ತವಲ್ಲ; ನಿನ್ನ ಚಿತ್ತವೇ ಆಗಲಿ" ಎಂದು ದೇವರಿಗೆ ಹೇಳಿದನು (ಲೂಕ 22:42). ಇದಕ್ಕೆ ಸಾಕ್ಷ್ಯವಾಗಿ ಯೇಸುವು ತನ್ನದೇ ಸ್ವಂತ ಚಿತ್ತವನ್ನು ಹೊಂದಿದ್ದು, ಅದನ್ನು ನಾಶಪಡಿಸಬೇಕಿತ್ತು, ಯಾಕೆಂದರೆ ಅದರ ಬದಲಿಗೆ ದೇವರ ಚಿತ್ತವು ನೆರವೇರಬೇಕಿತ್ತು. ಆತನು ನಿಜವಾಗಿಯೂ ಒಬ್ಬ ಮಾನವನಾಗಿದ್ದಲ್ಲಿ, ಈ ವಚನವನ್ನು ನಾವು ಗ್ರಹಿಸಬಹುದಾಗಿರುತ್ತೆ. ಆದರೆ ಯೇಸುವು ನಿಜವಾಗಿಯೂ ಮಾನವ ರೂಪಿಯಾದ ಒಬ್ಬ ದೇವರಾಗಲೀ ದೇವದೂತನಾಗಲೀ ಆಗಿದ್ದಲ್ಲಿ, ಇದು ಅರ್ಥವೇ ಕೊಡುವುದಿಲ್ಲ–ಅಸಂಬದ್ಧವಾದುದಾಗಿರುತ್ತೆ.

## ಯೇಸುವು ಹೇಗೆ ಪರಿಪೂರ್ಣ (Perfect) ನಾದನು ?

ಪರಿಪೂರ್ಣನಾದುದಕ್ಕಿಂತ ಕೆಳಮಟ್ಟದಲ್ಲಿ ಏನಾದರೊಂದು ಇರುವುದು ಎರಡು ರೀತಿಯಲ್ಲಿ ಕಾಣಬಹುದು. ಇವೆರಡಕ್ಕೂ ಇರುವ ವ್ಯತ್ಯಾಸವನ್ನು ಮೆಚ್ಚುವುದು ಬಹಳ ಮುಖ್ಯವಾದುದಾಗಿದೆ. ಇನ್ನೇನು ಬಿದ್ದುಹೋಗುವ ಸ್ಥಿತಿಯಲ್ಲಿರುವ ಒಂದು ಹಳೇ ಮನೆಯು ಪರಿಪೂರ್ಣವಾದುದಲ್ಲ. ಯಾಕೆಂದರೆ ಅದು ನಾಶವಾಗುವ ಸ್ಥಿತಿಯಲ್ಲಿದೆ. ಅದರಲ್ಲಿ ಬೇಕಾದಷ್ಟು ದೋಷಗಳಿವೆ.

ಅರ್ಧಂಬರ್ಧ ಕಟ್ಟಿದ ಹೊಸ ಮನೆಯೂ ಸಹ ಪರಿಪೂರ್ಣವಾದುದಲ್ಲ. ಆದರೆ ಇಲ್ಲಿ ಭಿನ್ನ ರೀತಿಯ ಅಪರಿಪೂರ್ಣತೆ ಇದೆ. ಅರ್ಧಂಬರ್ಧ ಕಟ್ಟಿದ ಈ ಮನೆಯಲ್ಲಿ ದೋಷವೇನೂ ಇಲ್ಲ. ಕಟ್ಟಿರುವಷ್ಟು ಅದು ಚೆನ್ನಾಗಿದೆ **ಆದರೆ ಅದು ಇನ್ನೂ ಪೂರ್ಣಗೊಂಡಿಲ್ಲ.**

ಯೇಸುವು ಮೊದಲನೇ ಅರ್ಥದಲ್ಲಿ ಎಂದಿಗೂ ಅಪರಿಪೂರ್ಣನಾಗಿರಲಿಲ್ಲ. ಅವನಲ್ಲಿ ಯಾವುದೇ ದೋಷವಿರಲಿಲ್ಲ. ಅವನು ಒಂದು ಸಾರಿಯಾದರೂ ಪಾಪ ಮಾಡಲಿಲ್ಲ. ಆದರೂ ಸಹ, ಅವನ ಗುಣಗಳು ಕ್ರಮೇಣ ವೃದ್ಧಿಯಾಗಬೇಕಿತ್ತು ;

ಪೂರ್ಣವಾಗುವತನಕ ಒಂದು ಮನೆಯನ್ನು ಕಟ್ಟುವ ಹಾಗೆ, ಈ ವಚನಗಳು ತಿಳಿಸುವಂತೆ, ಈ ಅರ್ಥದಲ್ಲಿ ಆತನು ಪರಿಪೂರ್ಣನಾಗಬೇಕಿತ್ತು :

"ಹೀಗೆ ಆತನು ಮಗನಾಗಿದ್ದರೂ **ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು.** ಇದಲ್ಲದೆ ಆತನು ಸಿದ್ಧಿಗೆ ಬಂದು (Made perfect)....ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು". (ಇಬ್ರಿಯ 5:8-9)

ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು (ದೇವರು) ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ **ಅವರ ರಕ್ಷಣಾಕರ್ತನನ್ನು** ಬಾಧೆಗಳ ಮೂಲಕ ಸಿದ್ಧಿಗೆ ತರುವುದು ಆತನಿಗೆ ಯುಕ್ತವಾಗಿತ್ತು". (ಇಬ್ರಿಯ 2:10)

ಯೇಸುವು ಒಬ್ಬ ದೈವೀಕ ವ್ಯಕ್ತಿಯಾಗಿದ್ದು ಮಾನವ ಶರೀರಧಾರಿಯಾಗಿದ್ದನು ಎಂಬ ಜನ ಸಾಮಾನ್ಯರ ಕಲ್ಪನೆಯು ತಪ್ಪಾಗಿದೆ ಎಂಬುದು ಮತ್ತೆ ಸ್ಪಷ್ಟವಾಗಿದೆ. ಅಂತಹ ಒಬ್ಬ ದೈವೀಕ ವ್ಯಕ್ತಿಯು, "ತಾನು ಅನುಭವಿಸುವ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು" ಎಂಬುದನ್ನು ಊಹಿಸಬಲ್ಲಿರಾ ? ಅಂತಹ ಒಬ್ಬ ದೈವೀಕ ವ್ಯಕ್ತಿಯು ಬಾಧೆಗಳಿಂದಲೇ ಸಿದ್ಧಿಗೆ (Prefect) ಬರುತ್ತಾನೆ ಎಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ?

ಎಂದಿಗೂ ಇಲ್ಲ ! ಇಲ್ಲಿ ಒಬ್ಬ ನಿಜವಾದ ಮಾನವನು ಪರಿಪೂರ್ಣ ಗುಣಗಳನ್ನು ಒಂದರ ಮೇಲೆ ಮತ್ತೊಂದನ್ನು ವರಸೆಯಾಗಿ ಇಡುವಂತೆ, ಬೆಳೆಸುತ್ತಾ ಬರುವುದನ್ನು ಕಾಣುತ್ತೇವೆ. ಯೇಸುವು ತಾನೇ ದೇವರಾಗಿದ್ದಲ್ಲಿ, ಇಲ್ಲವೇ ಒಬ್ಬ ಮಹಾ ದೇವದೂತನಾಗಿದ್ದಲ್ಲಿ, ಈ ಲೋಕಕ್ಕೆ ಬರುವ ಬಹಳ ಕಾಲದ ಹಿಂದೆಯೇ ಆತನು ಪರಿಪೂರ್ಣನಾಗಬೇಕಿತ್ತು. ಆದರೆ ಇದು ಆಗಿರಲಿಲ್ಲ. ಯೇಸುವು ತಾನು ಈ ಲೋಕದಲ್ಲಿ ಅನುಭವಿಸಿದ ಬಾಧೆಗಳಿಂದ ಮಾತ್ರವೇ ಪರಿಪೂರ್ಣನಾದನು ಎಂದು ನಮಗೆ ತಿಳಿಸಲ್ಪಟ್ಟಿದೆ.

### ಶಿಲುಬೆಯ ಮೇಲೆ ಆತನ ಮರಣ :

ಕರ್ತನಾದ ಯೇಸುವಿನ ಪ್ರಕೃತಿಯ ಬಗ್ಗೆ ಸಾಮಾನ್ಯ ಅಭಿಪ್ರಾಯ ಹೊಂದಿರುವವರಿಗೆ ಆತನ ಮರಣವು ಮತ್ತೊಂದು ಸಮಸ್ಯೆಯನ್ನು ತಂದೊಡ್ಡುವುದು. ಅದೇನೆಂದರೆ, ದೇವರು ಸಾಯಲು ಸಾಧ್ಯವಿಲ್ಲವೆಂದು ಸತ್ಯವೇದವು ಹೇಳುತ್ತದೆ. "ಆತನು **ಶಾಶ್ವತ ಜೀವವುಳ್ಳವನು**" (ದಾನಿಯೇಲ 12:7),

"ತಾನೊಬ್ಬನೇ **ಅಮರತ್ವವುಳ್ಳವನು....**" (1 ತಿಮೋಥೆ 6:16). ದೇವದೂತರೂ ಸಹ ಸಾಯುಂವಂಥಹವರಲ್ಲ. ಮತ್ತಾಯ (22:30).

ಆದರೂ ಸಹ, ಯೇಸುವು ಶಿಲುಬೆಯ ಮೇಲೆ ಸತ್ತನು ಎಂದು ಎಲ್ಲರಿಗೂ ಗೊತ್ತಿದೆ. ಇದಕ್ಕೂ ಒಂದು ಉತ್ತರವಿದೆಯೆಂದು ಕೆಲವು ಜನರು ಆಲೋಚಿಸುತ್ತಾರೆ. "ಹೌದು, ಆದರೆ ಅವನ ಶರೀರ ಮಾತ್ರ ಸತ್ತಿತು. ಶರೀರದೊಳಗಿದ್ದ ಆತ್ಮೀಕವಾದದ್ದು ಬದುಕಿಯೇ ಇತ್ತು". ಎಂದು ಅವರು ಹೇಳುತ್ತಾರೆ.

ಇದು ಆಗದು. ಸತ್ತಿದ್ದು ಯೇಸುವಿನ ಶರೀರ ಮಾತ್ರವಲ್ಲ ಎಂದು ಸತ್ಯವೇದವು ಹೇಳುತ್ತದೆ. "ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿದನು (ಯೆಶಾಯ 53:12). ಇದಲ್ಲದೆ, ನಮ್ಮ ಹಾಗೆಯೇ ಯೇಸುವೂ ಸಹ ಮರಣಕ್ಕೆ ಹೆದರಿದ್ದನು ಎಂದು ಸತ್ಯವೇದವು ಹೇಳುತ್ತದೆ. ನಮ್ಮಂತೆಯೇ ಮರಣವು ಆತನಿಗೆ ಒಂದು ಭಯಾನಕ ಹೊರೆಯಾಗಿತ್ತು. "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ, ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು". (ಇಬ್ರಿಯ 5:7).

ಯೇಸುವು ಮಾನವ ರೂಪದಲ್ಲಿದ್ದ ದೇವರಾಗಲೀ ಇಲ್ಲವೇ ಒಬ್ಬ ದೇವದೂತನಾಗಲೀ ಆಗಿರಲಿಲ್ಲವೆಂಬುದಕ್ಕೆ ಇದೂ ಸಹ ಬಲವಾದ ಸಾಕ್ಷ್ಯವಾಗಿದೆ. ಅಂತಹ ವ್ಯಕ್ತಿಯಾಗಿದ್ದಲ್ಲಿ, ತಾತ್ಕಾಲಿಕವಾದ ಮಾನವ ಶರೀರವನ್ನು ಕಳೆದುಕೊಳ್ಳುತ್ತೇನೆ ಎಂಬ ಆಲೋಚನೆಯಿಂದ ಮಾನಸಿಕ ವೇದನೆಯನ್ನು ಅನುಭವಿಸುತ್ತಾನೆಯೇ ? ನಿಶ್ಚಯವಾಗಿಯೂ ಒಬ್ಬ ನಿಜವಾದ ಮಾನವನು, ನಿಜವಾಗಿಯೂ ಸಾಯಲಿರುವವನು ಮಾತ್ರ, ಮರಣದ ಬಗ್ಗೆ ಈ ರೀತಿಯಾಗಿ ವೇದನೆ ಅನುಭವಿಸಲು ಸಾಧ್ಯವಿರುತ್ತೆ.

## ಏಕೆ ಯೇಸುವು ದೇವರ ಬಲಗಡೆಯಲ್ಲಿದ್ದಾನೆ ?

ಈಗ ಯೇಸುವು ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ. "ಯೆಹೋವನು ನನ್ನ ಒಡೆಯನಿಗೆ—ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು" (ಕೀರ್ತನೆ 110:1 ; ಇಬ್ರಿಯ 1:13). ಈ ವಚನದಲ್ಲಿ ಹಾಗೂ ಇತರೆ ರೀತಿಗಳಲ್ಲಿ ಯೇಸುವು ಎಷ್ಟು ಮಹಾನ್ ವ್ಯಕ್ತಿಯೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಬಹುಶಃ ಈಗ ನಾವು ಈ ಪ್ರಶ್ನೆಯನ್ನು ಕೇಳುವವರಾಗಿದ್ದಲ್ಲಿ,

"ಏಕೆ ಇದು ? ಏಕೆ ಯೇಸುವು ಅಂತಹ ಮಹಾನ್ ವ್ಯಕ್ತಿಯಾಗಿದ್ದಾನೆ ? ಏಕೆ ದೇವರು ಅತನಿಗೆ ಅಂತಹ ಉನ್ನತ ಸ್ಥಾನವನ್ನು ನೀಡಿದ್ದಾನೆ ?" ಯೇಸುವನ್ನು ದೇವರೆಂದೂ ಇಲ್ಲವೇ ಒಬ್ಬ ದೇವದೂತನೆಂದೂ ನಂಬುವಂತವರು ಒಂದು ಸರಳ ಉತ್ತರವನ್ನು ಹೇಳುತ್ತಾರೆ. ಅವರು "ಯೇಸುವು ಎಂದೆಂದೂ ಮಹಾನ್ ವ್ಯಕ್ತಿಯಾಗಿರುವುದರಿಂದ ; ಈ ಲೋಕಕ್ಕೆ ಬರುವ ಮುನ್ನ ಆತನು ಪರಲೋಕದಲ್ಲಿ ಒಂದು ಮಹಾ ಆತ್ಮೀಕ ವ್ಯಕ್ತಿಯಾಗಿದ್ದನು. ನಂತರ ಆತನು ತಾನಿದ್ದ ಸ್ಥಳಕ್ಕೆ ಹಿಂದಿರುಗಿದನು. ಅವನು ಬಂದಂತ ಉನ್ನತ ಸ್ಥಾನಕ್ಕೆ ಹಿಂದಿರುಗಿ ಹೋದನು".

ಆದರೆ ಇದು ಸತ್ಯವೇದದ ಉತ್ತರವಲ್ಲ. ಯೇಸುವು ಈ ಲೋಕದ ಜೀವಿತ ವನ್ನು ಮುಗಿಸಿದ ನಂತರ ಮಹಾನ್ ವ್ಯಕ್ತಿಯಾದನು ಮತ್ತು ದೇವರು ಆತನನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದರಿಂದ ಆತನು ಆಗ ಮಹಾನ್ ವ್ಯಕ್ತಿಯಾದನು ಮತ್ತು ಯೇಸುವು ಈ ಲೋಕದಲ್ಲಿ ಮಾಡಿದ ಕಾರ್ಯಗಳಿಂದಾಗಿ ಅತನು ಉನ್ನತ ಸ್ಥಾನವನ್ನು ಹೊಂದಲರ್ಹನಾದ್ದರಿಂದ, ದೇವರು ಆತನನ್ನು ಉನ್ನತ ಸ್ಥಾನಕ್ಕೆ ಏರಿಸಿದನು ಎಂಬುದಾಗಿ ಸತ್ಯವೇದವು ಆಗಿಂದಾಗ್ಗೆ ನಮಗೆ ತಿಳಿಸುತ್ತದೆ.

"ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು", ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ. ಮೃತಪಟ್ಟಿದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು". (ಇಬ್ರಿಯ 2:9). "ಅವನು (ಯೇಸುವು) ನನ್ನಲ್ಲಿ (ದೇವರಲ್ಲಿ) ಆಸಕ್ತನಾಗಿರುವುದರಿಂದ ಅವನನ್ನು ರಕ್ಷಿಸುವೆನು ; ನನ್ನ ನಾಮವನ್ನು ಅರಿತವನಾಗಿರುವುದರಿಂದ ಅವನನ್ನು ಉದ್ಧರಿಸುವೆನು" (ಕೀರ್ತನೆ 91:14). "ನೀನು (ಯೇಸುವು) ಧರ್ಮವನ್ನು ಪ್ರೀತಿಸಿದಿ, ಅಧರ್ಮ ವನ್ನು ದ್ವೇಷಿಸಿದಿ ; ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿ ದ್ದಾನೆ". (ಕೀರ್ತನೆ 45:7). "ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣ ದಿಂದಲೇ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದನು". (ಫಿಲಿಪ್ಪಿ 3:8).

ಯೇಸುವು ನಿಜವಾದ ಒಬ್ಬ ಮಾನವನಾಗಿದ್ದಾನೆ ಎಂಬುದಕ್ಕೆ ನಿಶ್ಚಯ ವಾಗಿಯೂ ಇದು ಅಂತಿಮವಾದ ಹಾಗೂ ನಿರ್ಣಾಯಕ ಸಾಕ್ಷ್ಯವಾಗಿರುತ್ತೆ. ಮಾನವ ಶೋಧನೆಯನ್ನು ಸಂಪೂರ್ಣವಾಗಿ ಜಯಿಸಿದ ಮಾನವನು ಅತನೇ ಆಗಿದ್ದಾನೆ. ಆದ್ದರಿಂದಲೇ ಆತನು ಈಗ ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ.

## ವಿಷಯುಗಳನ್ನು ದೇವರ ದೃಷ್ಟಿಯಲ್ಲಿ ನೋಡುವುದು

ಪ್ರಾರಂಭದಲ್ಲಿ ಲೇಖನದ "ನಾನು ಪರಲೋಕದಿಂದ ಇಳಿದು ಬಂದೆನು" ಎಂಬ ಯೇಸುವಿನ ಮಾತುಗಳ ಬಗ್ಗೆ ನೋಡಿದೆವು. ನಮ್ಮ ಸುತ್ತಮುತ್ತಲಿರುವ "ಎಲ್ಲಾ ಒಳ್ಳೆಯ ಆಶೀರ್ವಾದಗಳು ಮೇಲಣ ಪರಲೋಕದಿಂದ ಕಳುಹಿಸಲ್ಪಟ್ಟವು" ಎಂಬ ಸತ್ಯವೇದ ಆಧಾರಿತ ಸಂಗೀತದ ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಯೇಸುವಿನ ಈ ಮಾತುಗಳು ಸಾಂಕೇತಿಕವಾದವುಗಳೆಂದೂ ಅಕ್ಷರಶಃವಲ್ಲವೆಂದೂ ನಾವು ನೋಡಿದೆವು.

ಈಗ ನಾವು ಇನ್ನೂ ಹೆಚ್ಚಿನ ನಿಶ್ಚಿತವಾದ ನಿರ್ಣಯಕ್ಕೆ ಬರಬಹುದಾಗಿದೆ. ಇಲ್ಲಿಯು ತನಕ ನಾವು ನೋಡಿದ ಸತ್ಯವೇದದ ಸರಳ ಬೋಧನೆಯಿಂದ, ಯೇಸುವು ನಿಜವಾದ ಮಾನವನಾಗಿದ್ದನು ಎಂದು ನಮಗೆ ನಿಶ್ಚಿತವಾಯಿತು. ಹಾಗಿದ್ದಲ್ಲಿ, 'ಪರಲೋಕದಿಂದ ಇಳಿದು ಬರುವುದು' ಎಂಬ ಆತನ ಮಾತುಗಳು, ಸಾಂಕೇತಿಕವಾದವುಗಳೆಂಬುದನ್ನು ಸರಳವಾಗಿ ತಿಳಿಯಬಹುದಾಗಿದೆ. ಈಗ ಅದು ನಿಜವೆಂದು ನಮಗೆ ಅರಿವಾಗಿದೆ. ಪರಲೋಕದ ದೇವರು ಈ ಲೋಕವನ್ನು ಮುಟ್ಟಿ, ಯೇಸುವಿನ ತಾಯಿಯಾದ ಮರಿಯಳಲ್ಲಿ ಒಂದು ಅದ್ಭುತವಾದ ಕಾರ್ಯವನ್ನು ಮಾಡಿದಾಗ ತನ್ನ ಜೀವಿತವು ಪ್ರಾರಂಭವಾಯಿತು ಎಂದು ಯೇಸುವು ಅರ್ಥಮಾಡಿಕೊಂಡಿದ್ದನು. ಇದು ಇನ್ನು ಅನೇಕ ಸಮಸ್ಯೆಯ ವಚನಗಳಿಗೆ ಎಡೆಕೊಟ್ಟಿದೆ. ಉದಾಹರಣೆಗೆ, ಯೋಹಾನ 17:5 ರಲ್ಲಿ "ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು" ಎಂದು ಯೇಸುವು ಹೇಳಿದ ಮಾತುಗಳು ಹಾಗೂ ಸತ್ಯವೇದದ ಕೆಲವು ಇತರೆ ವಚನಗಳು ಇಂತಹ ಸಮಸ್ಯೆಗೆ ಅವಕಾಶ ನೀಡುತ್ತದೆ. ಇದೂ ಸಹ ಸಾಂಕೇತಿಕ ಭಾಷೆಯಾಗಿದೆಯೋ ?

ಹೌದು, ನಿಶ್ಚಯವಾಗಿಯೂ ಇದೂ ಸಹ ಸಾಂಕೇತಿಕ ಭಾಷೆಯಾಗಿದೆ. ಅಂತಹ ವಚನಗಳ ಅರ್ಥವನ್ನು ನಾವು ಬಯಸುವುದಾದರೆ, ವಿಷಯುಗಳನ್ನು ದೇವರ ದೃಷ್ಟಿಯಲ್ಲಿ ನೋಡಲು ನಾವು ವಿಶೇಷವಾದ ಪ್ರಯತ್ನವನ್ನು ಮಾಡಬೇಕಾಗಿದೆ. ದೇವರಿಗೂ ನಮಗೂ ಅನೇಕ ವ್ಯತ್ಯಾಸಗಳಿವೆ. ಈಗ ಮಾತ್ರ ನಮಗೆ ಸಂಬಂಧಿಸಿದ್ದು ಇದಾಗಿದೆ. ನಮಗೆ ಭವಿಷ್ಯತ್ (ಮುಂದೆ ಏನಾಗುತ್ತದೆ ಎಂಬುದು)ನಲ್ಲಿ ಸಂಭವಿಸುವುದರ ಬಗ್ಗೆ ಏನೂ ತಿಳಿದಿಲ್ಲ; ನಾಳೆ ದಿನ ಏನಾಗಬಹುದು ಎಂಬುದನ್ನು ಮಾತ್ರ ಊಹಿಸಬಹುದಾಗಿದೆ. ಆದರೆ ದೇವರಿಗೆ ಭವಿಷ್ಯತ್ ತಿಳಿದಿದೆ; ಈ ದಿನವು ನಮಗೆ ಎಷ್ಟು ಸತ್ಯವೋ ಹಾಗೆಯೇ ದೇವರಿಗೆ ನಾಳೆಯು ಬಗ್ಗೆ ತಿಳಿದಿರುತ್ತದೆ. ಆದ್ದರಿಂದಲೇ ಸತ್ಯವೇದದ ಪ್ರವಾದನೆಯು ಯಾವಾಗಲೂ ನಿಜವಾಗುವುದು. ಪೌಲನು ಈ ವಿಷಯದ ಬಗ್ಗೆ ರೋಮಾಪುರ

4:17 ರಲ್ಲಿ ವಾಖ್ಯಾನ ಮಾಡಿದ್ದಾನೆ. ಆದಿಕಾಂಡದಲ್ಲಿ ದೇವರು ಅಬ್ರಹಾಮನಿಗೆ ಹೀಗೆ ಹೇಳಿದ್ದಾನೆಂದು ಪೌಲನು ತಿಳಿಸಿದ್ದಾನೆ: "ನಾನು ನಿನ್ನನ್ನು ಅನೇಕ ಜನಾಂಗ ಗಳಿಗೆ ಮೂಲಪಿತೃವಾಗಿ ನೇಮಿಸಿದ್ದೇನೆ" "ನೇಮಿಸಿದ್ದೇನೆ". ಎಂಬ ಪದವನ್ನು ಗಮನಿಸಿ· "ನೇಮಿಸುತ್ತೇನೆ" ಎಂದಲ್ಲ. ಆ ಸಂದರ್ಭದಲ್ಲಿ ಅಬ್ರಹಾಮನಿಗೆ ಒಬ್ಬನೇ ಮಗನಿದ್ದನು. ಆದರೆ ದೇವರು ಏನನ್ನಾದರೂ ವಾಗ್ದಾನ ಮಾಡಿದರೆ, ಆ ವಾಗ್ದಾನವು ನಿಶ್ಚಿತವಾದದ್ದಾಗಿರುತ್ತದೆ. ಅದು ಆಗಲೇ ನೆರವೇರಿಸಿದಂತೆ ಇರುತ್ತದೆ. ಒಬ್ಬ ಮನುಷ್ಯನು ಒಂದು ವಾಗ್ದಾನ ಮಾಡಿದಾಗ, ಸಾಮಾನ್ಯವಾಗಿ ಹೀಗೆ ಹೇಳುತ್ತಾನೆ: "ನಾನು ಇಂಥದನ್ನು ಮಾಡುತ್ತೇನೆ". ಆದರೆ ದೇವರು, ತನ್ನ ಪ್ರವಾದಿಗಳ ಮೂಲಕ ಆಗಿಂದಾಗ್ಗೆ ಭವಿಷ್ಯತ್ತಿನ ಬಗ್ಗೆ ಹೇಳುತ್ತಾನೆ, "ನಾನು ಇಂಥಿಂಥದನ್ನು ಮಾಡಿದ್ದೇನೆ". ಅಂದರೆ ಆತನು ನಿಶ್ಚಯವಾಗಿಯೂ ಅದನ್ನು ಮಾಡುವವನಾಗಿದ್ದಾನೆ.

ರೋಮಾಪುರ 4:17ನೇ ವಚನದ ಮುಂದಿನ ಭಾಗದಲ್ಲಿ ಪೌಲನು ಅದೇ ಪಾಠವನ್ನು ಮುಂದಿಟ್ಟಿದ್ದಾನೆ, "ಇಲ್ಲದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು".

## ಭವಿಷ್ಯತ್ತು ದೇವರಿಗೆ ನೈಜವಾದದ್ದಾಗಿದೆ

ಅಪೋಸ್ತಲನಾದ ಪೌಲನಿಂದ ಸ್ವಲ್ಪ ಸಹಾಯ ಪಡೆದು ಒಂದು ಮುಖ್ಯವಾದ ನೀತಿಯನ್ನು ಈಗ ನಾವು ಸ್ಥಾಪಿಸಿದ್ದೇವೆ. ನಮಗೆ ಭೂತ ಹಾಗೂ ವರ್ತಮಾನ ಕಾಲಗಳು ನೈಜವಾಗಿವೆ. ಆದರೆ ಭವಿಷ್ಯತ್ತು ನಮ್ಮ ಕಣ್ಣಿನಿಂದ ಮರೆಯಾಗಿಡಲ್ಪಟ್ಟಿದೆ. ಆದರೆ ದೇವರು ನಮಗಿಂತ ಭಿನ್ನವಾಗಿದ್ದಾನೆ. ಆತನು ಭವಿಷ್ಯತ್ತನ್ನು ಪರಿಪೂರ್ಣವಾಗಿ ನೋಡಬಲ್ಲನು. ಮಾನವರಿಗೆ ವರ್ತಮಾನ ಕಾಲವು ಎಷ್ಟು ನೈಜವಾಗಿರುತ್ತದೋ ಹಾಗೆಯೇ ಭವಿಷ್ಯತ್ತು ದೇವರಿಗೆ ನೈಜವಾಗಿರುತ್ತದೆ. ತತ್ಪರಿಣಾಮವಾಗಿ ದೇವರು ಭವಿಷ್ಯತ್ತಿನಲ್ಲಿ ಸಂಭವಿಸುವ ಘಟನೆಗಳನ್ನು ಈಗಾಗಲೇ ನಡೆದಿರುವಂತೆ ಹೇಳಲು ಶಕ್ಯನಾಗಿದ್ದಾನೆ. ದೇವರು ಈ ರೀತಿಯಾಗಿ ಮಾಡಿರುವುದನ್ನು ಸತ್ಯವೇದದಲ್ಲಿ ಅನೇಕ ಕಡೆ ನೋಡ ಬಹುದಾಗಿದೆ. ಇಲ್ಲಿ ಮೂರು ವಚನಗಳನ್ನು ಕೊಟ್ಟಿದೆ:

1) "ಯೆಹೋವನು ಈ ವಾಕ್ಯವನ್ನು ನನಗೆ ದಯಪಾಲಿಸಿದನು – ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವುದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು; ನೀನು ಉದರ ದಿಂದ ಬರುವುದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು;" (ಯೆರೆಮೀಯ 1:4–5).

ಆ ಮನುಷ್ಯನು ಹುಟ್ಟುವ ಮೊದಲೇ ದೇವರು ಯೆರೆಮೀಯನನ್ನು ಅರಿತಿದ್ದನು! ವಾಸ್ತವವಾಗಿ ಇದು ಸಾಂಕೇತಿಕ ಭಾಷೆಯಾಗಿದೆ. ಯೆರೆಮೀಯನು

ಹುಟ್ಟುವ ಮೊದಲೇ ನಿಜವಾಗಿಯೂ ಇದ್ದನು ಎಂದರ್ಥವಲ್ಲ. ಅಂದರೆ ದೇವರು ಭವಿಷ್ಯತ್ತಿನೊಳಗೆ ನೋಡಲು ಶಕ್ಯನಾಗಿದ್ದಾನೆ ಮತ್ತು ಯೆರೆಮೀಯನು ಹುಟ್ಟುವ ಮುನ್ನವೇ ಅವನನ್ನು ನೋಡಬಲ್ಲವನಾಗಿದ್ದಾನೆ. ಇದನ್ನು ಇನ್ನೊಂದು ರೂಪದಲ್ಲಿ ಹೇಳುವುದಾದರೆ ಯೆರೆಮೀಯನು ಹುಟ್ಟುವ ಮೊದಲೇ ಅವನು ದೇವರ ಆಲೋಚನೆಯಲ್ಲಿ ಇದ್ದನು.

2) "ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ **ಆರಿಸಿಕೊಂಡನು.** ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು". (ಎಫೆಸ 1:4-5).

ಯೆರೆಮೀಯನು ಮಾತ್ರವಲ್ಲ; ತನ್ನ ಸಭೆಯ ಸದಸ್ಯರು ಹುಟ್ಟುವ ಮುಂಚೆಯೇ ಅವರನ್ನು ದೇವರು ಅರಿತಿದ್ದನು! ದೇವರ ಭವಿಷ್ಯತ್ತಿನ ಜ್ಞಾನದ ಮೇಲೆ ಅವಲಂಬಿತವಾದ ಇದೂ ಸಹ ಸಾಂಕೇತಿಕ ಭಾಷೆಯಾಗಿದೆ. ಅದೇ ವಚನದ ಎರಡನೇ ವಾಕ್ಯದಲ್ಲಿ ಪೌಲನು ತಾನು ಏನು ಅರ್ಥಮಾಡಿಕೊಂಡಿದ್ದನು ಎಂಬುದನ್ನು ಹೇಳುತ್ತಾನೆ: "ಆತನು ನಮ್ಮನ್ನು....ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ.... **ಮೊದಲೇ ಸಂಕಲ್ಪಿಸಿದ್ದನು.** (ನಿರ್ಧರಿಸಿದ್ದನು).

3) ಆತನು (ಯೇಸುವು) ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟು ಅಂತ್ಯ ಕಾಲದಲ್ಲಿ ನಿಮಗಾಗಿ ಪ್ರತ್ಯಕ್ಷನಾದನು. (1 ಪೇತ್ರ 1:20).

ದೇವರು ತಾನು ಈ ಲೋಕವನ್ನು ಸೃಷ್ಟಿ ಮಾಡುವುದಕ್ಕೆ ಮುಂಚೆಯೇ ಯೇಸುವಿನ ಬಗ್ಗೆ ಎಲ್ಲವೂ ಗೊತ್ತಿತ್ತು ಎಂಬುದಾಗಿ ಮೇಲೆ ಉಲ್ಲೇಖಿಸಿದ ವಚನವು ತಿಳಿಸುತ್ತದೆ. ಇದನ್ನು ಮಾತ್ರವೇ ನಾವು ನಿರೀಕ್ಷಿಸಬಹುದಾಗಿದೆ. ಹಿಂದಿನ ವಚನದಲ್ಲಿ ಲೋಕವು ಪ್ರಾರಂಭವಾಗುವುದಕ್ಕೆ ಮುಂಚೆಯೇ ದೇವರು ಆದಿಕ್ರಿಸ್ತರ ಬಗ್ಗೆ ತಿಳಿದಿದ್ದನು ಎಂಬುದನ್ನು ನಾವು ನೋಡಿದೆವು. ಯೆರೆಮೀಯ, ಅದಿಸಭೆ ಮತ್ತು ಕರ್ತನಾದ ಯೇಸುಕ್ರಿಸ್ತನು ಆದಿಯಿಂದಲೂ ಇವರೆಲ್ಲರೂ, ದೇವರ ಆಲೋಚನೆಯಲ್ಲಿದ್ದರು.

ಆದ್ದರಿಂದ ಯೇಸುವು ಪರಲೋಕದಲ್ಲಿರುವ ತನ್ನ ತಂದೆಗೆ ಹೀಗೆ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ; "ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು". (ಯೋಹಾನ 17:5)

ಇದರ ಅರ್ಥವೇನೆಂಬುದನ್ನು ಈಗ ನಾವು ತಿಳಿದಿದ್ದೇವೆ.

## ದೇವರು ಒಬ್ಬ ಮಹಾ ಯೋಜಕನು

ಮಾನವರು ಯಾವುದಾದರೊಂದು ಮುಖ್ಯ ಕಾರ್ಯವನ್ನು ಮಾಡಲು ಉದ್ದೇಶಿಸುವ ಮುನ್ನ ಒಂದು ಯೋಜನೆಯನ್ನು ರೂಪಿಸುವುದರಿಂದ ಪ್ರಾರಂಭಿಸುತ್ತಾರೆ.

ಶತ್ರುವಿನ ಮೇಲೆ ಧಾಳಿ ನಡೆಸುವ ಮುನ್ನ ಸೈನ್ಯಾಧಿಪತಿಯು ಯುದ್ಧದ ಒಂದು ಯೋಜನೆಯನ್ನು ತಯಾರಿಸಿ, ಅದನ್ನು ತನ್ನ ಅಧೀನ ಅಧಿಕಾರಿಗಳಿಗೆ ತಿಳಿಸುತ್ತಾನೆ. ಒಂದು ಬೃಹತ್ ಕಟ್ಟಡವನ್ನು ಕಟ್ಟುವ ಮುನ್ನ ಅದರ ವಿವರವಾದ ನಕ್ಷೆಯನ್ನು ತಯಾರಿಸಲು ಒಬ್ಬ ವಾಸ್ತುಶಿಲ್ಪಿಯನ್ನು ನೇಮಕ ಮಾಡುತ್ತಾರೆ.

ಮಾನವರ ಯೋಜನೆಗಳು ಅನೇಕ ವೇಳೆ ಏನೂ ಇಲ್ಲದಂತಾಗುತ್ತದೆ. ಶತ್ರುವಿನ ಅನಿರೀಕ್ಷಿತ ಧಾಳಿಯಿಂದಾಗಿ ತಮ್ಮ ಧಾಳಿಯನ್ನು ಪ್ರಾರಂಭಿಸಲು ಸೈನ್ಯಾಧಿಕಾರಿಗಳಿಗೆ ಸಾಧ್ಯವಿಲ್ಲವಾಗಬಹುದಾಗಿದೆ. ಕಕ್ಷಿಗಾರನು ಹಣ ಕೊರತೆ ಯಿಂದಾಗಿ ನಕ್ಷೆಯನ್ನು ಹರಿದುಹಾಕುವಂತೆ ವಾಸ್ತುಶಿಲ್ಪಿಗೆ ಹೇಳಬಹುದು.

ಆದರೆ ಈ ಲೋಕದಲ್ಲಿ ದೇವರು ತನ್ನ ಯೋಜನೆಯನ್ನು ಕಾರ್ಯಾಚರಣೆಗೆ ತರುವಲ್ಲಿ ಯಾವುದೊಂದೂ ಅಡ್ಡಿ ಬಾರದು. ಆತನು ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನವೇ ಈ ಕಾರ್ಯವನ್ನು ಪೂರೈಸಿರುವ ಹಾಗೆ ಆತನು ಮಾತನಾಡಲು ಪ್ರಾರಂಭಿಸಿದನು.

ಹಳೇ ಒಡಂಬಡಿಕೆಯಲ್ಲಿ ದೇವರ ಯೋಜನೆಗೆ ಒಂದು ಹೆಸರಿದೆ. ಅದನ್ನು ದೇವರ "ಜ್ಞಾನ" ಎಂದು ಕರೆದಿದೆ. ದಿ ನ್ಯೂ ಬೈಬಲ್ ಡಿಕ್ಷನರಿ (ಕ್ರಿಸ್ಟ ಡೆಲ್ಫಿಯನ್ಸ್‌ರಲ್ಲದ ಇತರೆ ಸಭೆಯವರಿಂದ ಬರೆದಿರುವ) ಯಲ್ಲಿ ಹಳೇ ಒಡಂಬಡಿಕೆ ಯಲ್ಲಿ ಉಲ್ಲೇಖಿಸಿರುವ ಜ್ಞಾನವು "ದೇವರು ತನ್ನ ಮನಸ್ಸಿನಲ್ಲಿ ಏನಿರುವುದೋ ಅದರ ನಿಶ್ಚಿತವಾದ ನೆರವೇರಿಕೆಯೇ ಆಗಿದೆ". ಅದು ಒಂದು ಒಳ್ಳೆಯ ವಿವರಣೆಯಾಗಿದೆ. ಅದು ಹಳೇ ಒಡಂಬಡಿಕೆಯ ವಚನವನ್ನು ಚೆನ್ನಾಗಿ ಸರಿ ಹೊಂದುತ್ತದೆ. "ಜ್ಞಾನವೆಂಬಾಕೆಯು ಕರೆಯುತ್ತಾಳೆ, ವಿವೇಕವೆಂಬ ಆಕೆಯೇ ದನಿಗೈಯುತ್ತಾಳೆ....ಪುರಪ್ರದೇಶದ ದ್ವಾರಗಳಲ್ಲಿ, ಬಾಗಿಲುಗಳೊಳಗೆ ಜನ ಸೇರುವ ಸ್ಥಳದಲ್ಲಿ ಹೀಗೆ ಕೂಗುತ್ತಾಳೆ....ಯೆಹೋವನು ತನ್ನ ಸೃಷ್ಟಿ ಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು ; ಆತನ ಪುರಾತನ ಕಾರ್ಯಗಳಲ್ಲಿ ನಾನೇ ಪ್ರಥಮ. ಪ್ರಾರಂಭದಲ್ಲಿ, ಭೂಮಿಯು ಹುಟ್ಟುವುದಕ್ಕಿಂತ ಮುಂಚೆ, ಅನಾದಿ ಕಾಲದಲ್ಲಿ ಸ್ಥಾಪಿಸಲ್ಪಟ್ಟೆನು". (ಜ್ಞಾನೋಕ್ತಿ 8:1-23).

ಅಂದರೆ, ದೇವರು ಈ ಲೋಕದ ಮೇಲೆ ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನ, ಆತನು ತನ್ನ ಯೋಜನೆಯನ್ನು (ಯೆಹೂದ್ಯರು ಕರೆದಿರುವಂತೆ—ಜ್ಞಾನವನ್ನು) ರೂಪಿಸಿದನು.

ಗ್ರೀಕರು—ಒಬ್ಬ ದೇವರು ಅಥವಾ ದೇವರುಗಳಲ್ಲಿ (ಸತ್ಯವೇದದ ದೇವರಲ್ಲ) ನಂಬಿಕೆಯಿಟ್ಟಿದ್ದ ಅವರು ಅದಕ್ಕೆ ಬೇರೊಂದು ಹೆಸರನ್ನು ಕೊಟ್ಟಿದ್ದರು. ಅವರು ಅದನ್ನು ದೇವರ "ವಾಕ್ಯ" ಎಂಬ ಗ್ರೀಕ್ ಪದಕ್ಕೆ "ದೇವರ ಯೋಜನೆ ಮತ್ತು ಸೃಷ್ಟಿಕಾರ್ಯದ ಆತನ ಶಕ್ತಿಯಾಗಿದೆ".

ಇದು ನಮಗೆ ಸಹಾಯಕವಾಗಿದೆ. ಯಾಕೆಂದರೆ ಯೋಹಾನನ ಸುವಾರ್ತೆಯು ಒಂದನೇ ಅಧ್ಯಾಯವನ್ನು ನಾವು ಅರ್ಥ ಮಾಡಿಕೊಳ್ಳುವಂತೆ ಮಾಡುತ್ತದೆ. ಯೋಹಾನನು ಗ್ರೀಕರ ದೇವರ ವಾಕ್ಯದ ಕಲ್ಪನೆಯೊಂದಿಗೆ ಯೆಹೂದ್ಯರ ದೇವರ ಜ್ಞಾನದ ಕಲ್ಪನೆಯನ್ನು ಸೇರಿಸಿದಂತಿದೆ. ಅವನ ಸುವಾರ್ತೆಯು ಹೀಗೆ ಪ್ರಾರಂಭವಾಗುತ್ತದೆ. "ಆದಿಯಲ್ಲಿ ವಾಕ್ಯವಿತ್ತು".

ಈ ವಾಕ್ಯದಿಂದ ಕೆಲವು ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ಇತರರು ತಾವು ಅರ್ಥ ಮಾಡಿಕೊಳ್ಳುತ್ತೇವೆಂದು ಭಾವಿಸುತ್ತಾರೆ; ಆದರೆ ಅವರು ಅದರಿಂದ ತಪ್ಪಾದ ಅರ್ಥವನ್ನು ಮಾಡಿಕೊಳ್ಳುತ್ತಾರೆ; ಯಾಕೆಂದರೆ ಅವರು "ವಾಕ್ಯ" ವೆಂಬುದನ್ನು ಒಬ್ಬ ಜೀವಂತ ವ್ಯಕ್ತಿಯೆಂದು ಭಾವಿಸುತ್ತಾರೆ. (ಗ್ರೀಕ್ ಭಾಷೆಯಲ್ಲಿ "ಅವನು" ಎಂಬ ಪದ "ಅದು" ಎಂಬುದಾಗಿಯೂ ಅರ್ಥ ಕೊಡುತ್ತದೆ. ಆದ್ದರಿಂದಲೇ ಭಾಷಾಂತರಕಾರರು ಆ ರೀತಿಯಾಗಿ ಉಪಯೋಗಿಸುತ್ತಾರೆ).

ಈಗ ನಾವು ದೇವರ "ವಾಕ್ಯ"ಕ್ಕೆ ಬದಲಾಗಿ, ಆತನ "ಯೋಜನೆ"ಯನ್ನು ಆಲೋಚಿಸಿದಲ್ಲಿ, ಹಾಗೂ "ಅವನು" ಎಂಬುದಕ್ಕೆ ಬದಲಾಗಿ "ಅದು" ಎಂದು ಉಪಯೋಗಿಸಿದಲ್ಲಿ, ಯೋಹಾನ 1ನೇ ಅಧ್ಯಾಯದಿಂದ ನಾವಿದನ್ನು ಕಲಿಯುತ್ತೇವೆ :

"ಆದಿಯಲ್ಲಿ ಯೋಜನೆಯಿತ್ತು, ಆ ಯೋಜನೆಯು ದೇವರ ಬಳಿಯಲ್ಲಿತ್ತು, ಮತ್ತು ಆ ಯೋಜನೆಯು ದೇವರಾಗಿತ್ತು. ಅದು ಆದಿಯಲ್ಲಿ ದೇವರ ಬಳಿಯಲ್ಲಿತ್ತು ; ಸಮಸ್ತವೂ ಅದರ ಮೂಲಕವಾಗಿ ಉಂಟಾಯಿತು, ಅದು ಇಲ್ಲದೆ, ಉಂಟಾದವುಗಳಲ್ಲಿ ಒಂದಾದರೂ ಉಂಟಾಗಲಿಲ್ಲ. ಅದರಲ್ಲಿ ಜೀವವಿತ್ತು, ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು....ಆ ಯೋಜನೆಯು ಮಾಂಸವಾಯಿತು, ಕೃಪೆಯಿಂದಲೂ ಸತ್ಯದಿಂದಲೂ ತುಂಬಿ ನಮ್ಮಲ್ಲಿ ವಾಸ ಮಾಡಿತು ; ಮತ್ತು ತಂದೆಯಿಂದ ಒಬ್ಬನೇ ಹುಟ್ಟಿದವನ ಮಹಿಮೆಯ ಹಾಗೆ ಅವನ ಮಹಿಮೆಯನ್ನು ನೋಡಿದೆವು". (ಯೋಹಾನ 1:1-14).

ಯೋಹಾನನ ಈ ಮಾತುಗಳು ಸತ್ಯವೇದದ ಬೋಧನೆಯನ್ನು ಸುಂದರವಾಗಿ ನಿರೂಪಿಸುತ್ತದೆ. ಯೇಸುವು ಆದಿಯಿಂದಲೂ ಪರಲೋಕದಲ್ಲಿ

ಅಸ್ತಿತ್ವದಲ್ಲಿದ್ದನು. ಆದರೆ ಒಬ್ಬ ವ್ಯಕ್ತಿಯಾಗಲ್ಲ. ದೇವರ ಯೋಜನೆಯ ಕೇಂದ್ರವಾಗಿ ದೇವರ ಮನಸ್ಸಿನಲ್ಲಿ ಒಂದು ಮಹಾ ಕಲ್ಪನೆಯಂತೆ ಆತನು ಅಸ್ತಿತ್ವದಲ್ಲಿದ್ದನು. ಬೆತ್ಲೆಹೇಮಿನಲ್ಲಿ ಆತನು ಹುಟ್ಟುವ ತನಕ ಆತನು ಒಬ್ಬ ವ್ಯಕ್ತಿಯಾಗಿ ಅಸ್ತಿತ್ವದಲ್ಲಿರಲಿಲ್ಲ. ಆಗ, ಯೋಹಾನನ ವಾಕ್ಯದಲ್ಲಿ, "ಆ ಯೋಜನೆಯು ಮಾಂಸವಾಯಿತು (ಶರೀರವಾಯಿತು)".

**ಯೇಸುವನ್ನು ಗೌರವಿಸುವುದು :**

ಸತ್ಯವೇದವು ಯೇಸುವಿನ ಬಗ್ಗೆ ನಿಜವಾಗಿಯೂ ಏನು ಬೋಧಿಸುತ್ತದೆ ಎಂಬುದನ್ನು ನೋಡಿದೆವು. ಹಿಂದೆಂದೂ ನಾವು ಮಾಡದ ರೀತಿಯಲ್ಲಿ ನಾವು ಆತನನ್ನು ಗೌರವಿಸಲು ಪ್ರಾರಂಭಿಸಬಹುದಾಗಿದೆ. ನಾವು ಈಗಾಗಲೇ ಏನನ್ನು ಚರ್ಚಿಸಿದೆವೆಂಬುದನ್ನು ನೀವು ಆಲೋಚಿಸಿದಲ್ಲಿ, ಅದು ಸ್ಪಷ್ಟವಾಗುತ್ತದೆ.

ಸತ್ಯವೇದದಲ್ಲಿ ಎರಡು ವಿಧಗಳ ಭಾಷೆಯು ಇರುವುದನ್ನು ನಾವು ನೋಡಿದೆವು. ಅಕ್ಷರಶಃ ಭಾಷೆ–ಅಂದರೆ ಮೇಲ್ನೋಟಕ್ಕೆ ಅದು ಏನು ಹೇಳುತ್ತದೋ ಅದಾಗಿರುತ್ತದೆ. ಮತ್ತೊಂದು ಸಾಂಕೇತಿಕ ಭಾಷೆ–ಆಳವಾದ ಅರ್ಥ ಹೊಂದಿರುವಂಥದ್ದು.

ಯೇಸುವು ತಾನು ಪರಲೋಕದಿಂದಿಳಿದು ಬಂದೆನೆಂದು ಹೇಳಿದ ಸಮಯದಲ್ಲಿ, ಆತನೆಂದಿಗೂ ವೈಯಕ್ತಿಕವಾಗಿ ಪರಲೋಕದಲ್ಲಿರಲಿಲ್ಲ. ಆದ್ದರಿಂದ ಆತನ ಮಾತುಗಳು ಅಕ್ಷರಶಃ ಸತ್ಯವಾಗಿರಲಿಲ್ಲ ; ಆದರೆ ಬಹು ಆಳವಾದ ಅರ್ಥವನ್ನೊಳಗೊಂಡಿರಲೇಬೇಕು.

ದೇವರು ಸಮಸ್ತವನ್ನೂ ಬಲ್ಲವನಾದ್ದರಿಂದ, ಆತನು ಭವಿಷ್ಯತ್ ಕಾಲಕ್ಕೂ ನೋಡಬಲ್ಲವನಾಗಿದ್ದಾನೆ. ಸರ್ವಶಕ್ತನಾದ ದೇವರು ಯಾವುದಾದರೊಂದು ಕಾರ್ಯ ಮಾಡಬೇಕೆಂದು ನಿರ್ಧರಿಸಿದಾಗ, ಅದನ್ನು ಆಗಲೇ ಮಾಡಿದ ಹಾಗೆ. ಆದ್ದರಿಂದ ದೇವರು ಲೋಕವನ್ನು ಸೃಷ್ಟಿಸುವ ಮುಂಚೆ, ಆತನು ಒಂದು ಯೋಜನೆಯನ್ನು ರೂಪಿಸಿದನು. ಯೇಸುವು ಆ ಯೋಜನೆಯ ಪ್ರಾರಂಭವಾಗಿದ್ದನು, ಮತ್ತು ಅದರ ಬಹು ಮುಖ್ಯವಾದ ಭಾಗವಾಗಿದ್ದನು. ಯೇಸುವಿನ ಹಿಂಬಾಲಕರೆಲ್ಲರೂ ಸಹ ಆ ಯೋಜನೆಯಲ್ಲಿದ್ದರು. ಅವರೂ ಮತ್ತು ಅವರ ಕರ್ತನು ಲೋಕವು ಉಂಟಾಗುವುದಕ್ಕಿಂತ ಮುಂಚೆಯೇ ಅಸ್ತಿತ್ವದಲ್ಲಿದ್ದರೆಂದು ಹೇಳಲಾಗಿದೆ.

ಯೇಸುವಾಗಲೀ ಅವನ ಹಿಂಬಾಲಕರಾಗಲೀ ಆಗ ಜೀವಂತವಾಗಿರಲಿಲ್ಲ. ಅವರು ದೇವರ ಯೋಜನೆಯ ಒಂದು ಭಾಗವಾಗಿ ಆತನ ಮನಸ್ಸಿನಲ್ಲಿದ್ದರು. ಈ ಒಂದು ಸಾಂಕೇತಿಕ ಅರ್ಥದಲ್ಲಿ ಸೃಷ್ಟಿಯು ಪ್ರಾರಂಭದಿಂದಲೂ ಅವರೆಲ್ಲರೂ ಪರಲೋಕದಲ್ಲಿದ್ದರು.

ಆದರೆ ಕರ್ತನಾದ ಯೇಸುಕ್ರಿಸ್ತನು ಬೆತ್ಲೆಹೇಮಿನಲ್ಲಿ ಹುಟ್ಟಿದಾಗಿನಿಂದ ಮಾತ್ರವೇ ಆತನ ನಿಜವಾದ ಜೀವಿತವು ಪ್ರಾರಂಭವಾಯಿತು. ಆತನ ಜನನವು ಒಂದು ಅದ್ಭುತದಿಂದಾಯಿತು. ದೇವರು ಆತನ ತಂದೆಯಾಗಿದ್ದನು, ಆತನ ತಾಯಿಯಾದ ಮರಿಯಳು ಒಬ್ಬ ಕನ್ಯೆಯಾಗಿದ್ದಳು. ಆಕೆಯು ಆತನ ನಿಜವಾದ ತಾಯಿಯಾಗಿದ್ದಳು ಮತ್ತು ಆತನು ಆಕೆಗೆ ಹೇಗೆ ಮಗನಾಗಿದ್ದನೋ ಅಂತೆಯೇ ದೇವರಿಗೂ ಮಗನಾಗಿದ್ದನು. ಆದ್ದರಿಂದಲೇ ಅವನು ಒಬ್ಬ ನಿಜವಾದ ಮಾನವನಾಗಿದ್ದನು. ಅಂದರೆ ಇತರೆ ಯಾವುದೇ ಮಾನವನು ಶೋಧಿಸಲ್ಪಡುವ ಹಾಗೆ ಆತನು ಸಹ ಶೋಧಿಸಲ್ಪಟ್ಟನು.

ಆದರೆ ಆತನು ಸಂಪೂರ್ಣವಾಗಿ ಶೋಧನೆಯನ್ನು ಜಯಿಸಿದನು. ಆತನು ಪಾಪರಹಿತ ಜೀವಿತವನ್ನು ಜೀವಿಸಿದನು, ಮತ್ತು ಒಂದು ಪರಿಪೂರ್ಣವಾದ ಗುಣವನ್ನು ಬೆಳೆಸಿಕೊಂಡನು. ಇದಕ್ಕೆ ಪ್ರತಿಫಲವಾಗಿ ದೇವರು ಆತನನ್ನು ವಿಶ್ವದಲ್ಲಿಯೇ ಒಬ್ಬ ಮಹಾನ್ ಪುರುಷನನ್ನಾಗಿ ಮಾಡಿದನು.

ದೇವರು ಯೇಸುವನ್ನು ಈ ರೀತಿಯಾಗಿ ಗೌರವಿಸಿದಲ್ಲಿ, ನಾವು ಸಹ ಅದೇ ಕಾರಣಕ್ಕಾಗಿ ಆತನನ್ನು ಗೌರವಿಸಬೇಕು. ನಾವು ಪರಲೋಕದ ಕಡೆಗೆ ಕಣ್ಣೆತ್ತಿ ನೋಡುವಂತವರಾಗಿ, ದೇವರಿಗೆ ಹೀಗೆ ಹೇಳುವವರಾಗಬೇಕು ; "ಪರಲೋಕದ ನಮ್ಮ ತಂದೆಯೇ, ನಾನು ಶೋಧನೆಯನ್ನು ಹೋರಾಡುವ ಹಾಗೆ, ನಿನ್ನ ಮಗನೂ ಸಹ ಹೋರಾಡಬೇಕಾಯಿತು. ಆದ್ದರಿಂದ ನಾನು ಅನುಭವಿಸುವ ಪ್ರಯಾಸವನ್ನು ಆತನು ಬಲ್ಲನು. ಆದರೆ ಶೋಧನೆಯ ವಿರುದ್ಧ ಆತನು ಹೋರಾಡಿದ ಪ್ರತಿಯೊಂದು ಹೋರಾಟವನ್ನೂ ಆತನು ಗೆದ್ದನು, ಆದರೆ ನಾನು ಹೋರಾಟದಲ್ಲಿ ಅನೇಕ ಸಾರಿ ಸೋತಿದ್ದೇನೆ. ದೇವರೇ, ನಾನು ಆತನ ಮಹಾಜಯವನ್ನು ಮೆಚ್ಚುತ್ತೇನೆ, ಮತ್ತು ಆತನ ಮಾದರಿಯನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅನುಸರಿಸಲು ಇಚ್ಛೈಸುತ್ತೇನೆ. ಆದರೆ, ನಾನು ಬಲಹೀನನು. ದೇವರೇ ನನ್ನನ್ನು ಕರುಣಿಸು, ನನಗೆ ಸಹಾಯಮಾಡು ಸಾಧ್ಯವಾದಷ್ಟು ನಿನ್ನ ಮಗನ ಹಾಗೆ ಇರಲು ಸಹಾಯ ಮಾಡು. ನಾನು ಪೂರ್ಣ ಹೃದಯದಿಂದ ಆತನನ್ನು ಹಿಂಬಾಲಿಸಲು ಎಲ್ಲಾ ಪ್ರಯತ್ನವನ್ನು ಮಾಡಲು ನನಗೆ ಸಹಾಯ ಮಾಡು. ಆತನನ್ನು ಪ್ರೀತಿಸಲು, ಆತನನ್ನು ಗೌರವಿಸಲು ಹಾಗೂ ಆತನಿಗೆ ವಿಧೇಯನಾಗಿರಲು ನನಗೆ ಸಹಾಯ ಮಾಡು. ಸರ್ವಶಕ್ತನಾದ ದೇವರೇ, ನಿನ್ನ ಮಗನು ಈ ಬಾಧೆಯ ಹಾಗೂ ಮರಣದ ಜೀವಿತದಲ್ಲಿ ತಾನೇ ಜಯ ಹೊಂದಿದನು. ಆತನು ನನ್ನನ್ನು ಅರ್ಥಮಾಡಿಕೊಳ್ಳುವವನಾದ್ದರಿಂದ, ದೇವರೇ, ನಿನ್ನ ಸಹಾಯಕ್ಕಾಗಿ ಆತನ ಮೂಲಕ ಬೇಡುತ್ತೇನೆ. ನೀನು ನನ್ನ ಪ್ರಾರ್ಥನೆಯನ್ನು ಕೇಳುತ್ತೀ ಎಂದು ತಿಳಿದಿದ್ದೇನೆ".

—ಭಾ. ಚಂದುದಾಸ್